ಕರ್ನಾಟಕ ಸಾಹಿತ್ಯ ಅಕಾದೆಮಿ

೧೯೮೫

C-33

ಕವಿತೆಗಳು



ಸಂಪಾದಕ : ವೇಣುಗೋಪಾಲ ಸೊರಬ

C-33

ಕವಿತೆಗಳು : ೧೯೮೫

ಸಂಪಾದಕ

ವೇಣುಗೋಪಾಲ ಸೊರಬ

ಕರ್ನಾಟಕ ಸಾಹಿತ್ಯ ಅಕಾದೆಮಿ
ಬೆಂಗಳೂರು

KAVITHEGALU : 1985, An Anthology of poems, published during 1985 in Kannada periodicals; edited by Venugopala Soraba, Head of the Dept. of English, Rural College, Kanakapura, Bangalore District, published by Karnataka Sahitya Academy, Bangalore-2, Pages: 12+105, 1st edition 1985.

ಹಕ್ಕುಗಳು ಲೇಖಕರವು

ಬೆಲೆ : ಮೂರು ರೂಪಾಯಿ

ಮುದ್ರಕರು : ಭಾರತಲಕ್ಷ್ಮೀ ಪ್ರೆಸ್, ಬಳೇಪೇಟೆ ವೃತ್ತದ ಬಳಿ, ಬೆಂಗಳೂರು-೫೩

ಅಧ್ಯಕ್ಷರ ಮಾತು

ಕರ್ನಾಟಕ ಸಾಹಿತ್ಯ ಅಕಾದೆಮಿ ಕೆಲವು ವರ್ಷಗಳಿಂದ ತಪ್ಪದೆ ಸಾಹಿತ್ಯ ಸಂಕಿರಣ, ಸಾಹಿತ್ಯ ಕಮ್ಮಟ ಮತ್ತು ಹಲವು ಬಗೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. 1984ರಲ್ಲಿ ಸರ್ಕಾರ ನೇಮಿಸಿದ ಕರ್ನಾಟಕ ಸಾಹಿತ್ಯ ಅಕಾದೆಮಿಯ ಪ್ರಸ್ತುತ ಸಮಿತಿ, 1984ರ ಮಾರ್ಚಿಯಿಂದ 1986ರ ಮಾರ್ಚ್‌ವರೆಗೆ ನಾಡಿನ ನಾನಾ ಕಡೆ ಸ್ವತಂತ್ರವಾಗಿ ನಡೆಸಿದ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಏರ್ಪಡಿಸಿದ ಸಾಹಿತ್ಯ ಕಾರ್ಯಕ್ರಮಗಳ ಸಂಖ್ಯೆ 95. ಇದರಲ್ಲಿ ಸಿಂಹಪಾಲು, ವಿವಿಧ ವಿಚಾರ ಸಂಕಿರಣಗಳಿಗೆ ಮತ್ತು ಕವಿಗೋಷ್ಠಿಗಳಿಗೆ ಮೀಸಲಾಗಿದೆ. ಅಕಾದೆಮಿ 1985ರ ಸಾಲಿನಲ್ಲಿ **"ಜಿಲ್ಲೆಗೊಂದು ಸಾಹಿತ್ಯ ಕಾರ್ಯಕ್ರಮ"**ವನ್ನು ಮತ್ತು **"ತಾಲ್ಲೂಕಿಗೊಂದು ಸಾಹಿತ್ಯ ಕಾರ್ಯಕ್ರಮ"**ವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿತು. ಪ್ರಮುಖ ನಗರಗಳಿಗೆ ಸೀಮಿತವಾಗಿದ್ದ ಸಾಹಿತ್ಯ ಅಕಾದೆಮಿ, ಇಷ್ಟು ವ್ಯಾಪಕವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಂಡದ್ದು ಒಂದು ಅಪೂರ್ವ ದಾಖಲೆಯಾಗಿದೆ. 1986ನೆಯ ಸಾಲಿನಲ್ಲಿ **"ಗ್ರಾಮಾಂತರ ಪ್ರದೇಶಗಳಲ್ಲಿ ಸಾಹಿತ್ಯ ಕಾರ್ಯಕ್ರಮ"** ಎಂಬ ವಿನೂತನ ಯೋಜನೆ ಕಾರ್ಯರೂಪಕ್ಕೆ ಬರುತ್ತಿದೆ.

ಇದರೊಂದಿಗೆ ಕೆಲವು ಒಳ್ಳೆಯ ಸಾಹಿತ್ಯ ಕೃತಿಗಳನ್ನು ಅಕಾದೆಮಿ ಹೊರ ತರುತ್ತಿದೆ. ಇವುಗಳಲ್ಲಿ ಆಯಾ ವರ್ಷ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾದ ಉತ್ತಮ ಕವನ, ವಿಮರ್ಶೆ ಮತ್ತು ಕಥೆಗಳನ್ನು ಆಯ್ಕೆ ಮಾಡಲು, ಪ್ರತ್ಯೇಕ ಸಂಕಲನಗಳನ್ನು ಪ್ರಕಟಿಸಲು ತಜ್ಞರಾದ ಸಂಪಾದಕರನ್ನು ನೇಮಿಸಿ, ಕಳೆದ ಆರು ವರ್ಷಗಳಲ್ಲಿ ಈ ಪ್ರಕಾರಗಳಲ್ಲಿ ಪುಸ್ತಕಗಳನ್ನು ಅಕಾದೆಮಿ ಪ್ರಕಟಿಸಿದೆ ; ಇವು ಸಾಕಷ್ಟು ಜನಾದರಣೆಯನ್ನು ಪಡೆದಿವೆ.

1983ರ ವರೆಗೆ ಇಂಥ ವಾರ್ಷಿಕ ಪ್ರಕಟಣೆಗಳಲ್ಲಿ ಪ್ರಕಾಶವಾಗುತ್ತಿದ್ದ ಮೇಲಿನ ಮೂರು ಸಾಹಿತ್ಯ ಪ್ರಕಾರಗಳ ಪುಸ್ತಕಗಳ ಜೊತೆಗೆ **ಮಕ್ಕಳ ಸಾಹಿತ್ಯವನ್ನು** 1984ರಿಂದ ಪ್ರಾರಂಭಿಸಿದ್ದೇವೆ. ಇದಲ್ಲದೆ 1985 ರಿಂದ ಈ ಪ್ರಕಟಣೆಗಳಲ್ಲಿ **ಪ್ರಬಂಧಗಳನ್ನು** ಕುರಿತ ವಾರ್ಷಿಕ ಸಂಕಲನವೂ ಹೊರ ಬರುತ್ತಿದೆ. ಹೀಗಾಗಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಮ್ಮ ವಾರ್ಷಿಕ ಪ್ರಕಟಣೆಗಳ ಸಂಖ್ಯೆ 3ರಿಂದ 5ಕ್ಕೆ ಏರಿದೆ.

ಕರ್ನಾಟಕ ಸಾಹಿತ್ಯ ಅಕಾದೆಮಿ 1984 ರಿಂದ ಇನ್ನೂ ಕೆಲವು ವಿಶೇಷ ಪ್ರಕಟಣೆಗಳ ಯೋಜನೆಯನ್ನು ಹಮ್ಮಿಕೊಂಡಿದೆ. ಅಕಾದೆಮಿ ಪ್ರಾರಂಭವಾಗಿ ಎರಡು ದಶಕಗಳ ಮೇಲಾದರೂ ಈ ತನಕ ಅದಕ್ಕೆ ತನ್ನದೇ ಆದ ಒಂದು ಪತ್ರಿಕೆ ಇರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರತ್ಯೇಕವಾಗಿ **'ಚಂದನ'** ಎಂಬ ಹೆಸರಿನ ತ್ರೈಮಾಸಿಕವನ್ನು ಪ್ರಾರಂಭಿಸಿ, ಈಗಾಗಲೇ ಅದರ ಆರು ಸಂಚಿಕೆಗಳು ಹೊರಬಂದಿವೆ. ಕನ್ನಡದ ಉತ್ತಮ ಬರವಣಿಗೆಯನ್ನು, ಅಕಾದೆಮಿಯ ನಾನಾ ಕಾರ್ಯಾವಳಿಗಳನ್ನು ಕನ್ನಡ ತಿಳಿಯದ ಜನಕ್ಕೆ ಪರಿಚಯಿಸಿಕೊಡುವ ದಿಕ್ಕಿನಲ್ಲಿ ಇಂಗ್ಲಿಷ್ **ಚಂದನ** ಒಂದು ನಮ್ರ ಪ್ರಯತ್ನ ವಾಗಿದೆ ; ದೇಶದ ನಾನಾ ಕಡೆಯ ಲೇಖಕರ ಮತ್ತು ಧೀಮಂತರ ಪ್ರಶಂಸೆಗೆ ಪಾತ್ರವಾಗಿದೆ.

ಇದಲ್ಲದೆ ಕನ್ನಡದ ಮಹತ್ವದ ಹಾಗೂ ಪ್ರಾತಿನಿಧಿಕವಾದ ಸುಮಾರು 35 ಲೇಖಕರ ಮುಖ್ಯ ಕೃತಿಗಳ ಪರಿಚಯಾತ್ಮಕ ಬರಹಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರತ್ಯೇಕವಾಗಿ ಪ್ರಕಟಿಸುವ ಕೆಲಸವೂ ನಡೆಯುತ್ತಿದೆ.

ಹತ್ತು ವರ್ಷಗಳ ಅವಧಿಯಲ್ಲಿ ಕನ್ನಡ ಭಾಷೆಯಲ್ಲಿ, ಪುಸ್ತಕ ರೂಪದಲ್ಲಿ ಪ್ರಕಟವಾಗಿರುವ ಒಳ್ಳೆಯ ಕವಿತೆ, ಕಥೆ, ವಿಮರ್ಶೆ, ಪ್ರಬಂಧಗಳನ್ನು ಪ್ರತ್ಯೇಕವಾಗಿ **ದಶವಾರ್ಷಿಕ** ಎಂಬ ಹೆಸರಿನ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸುವ ಉದ್ದೇಶವೂ ಅಕಾದೆಮಿಗೆ ಇದೆ. ಇವನ್ನು ಇಂಗ್ಲಿಷಿಗೂ ತರ್ಜುಮೆ ಮಾಡಿ ಹೊರತರುವ ಆಶಯವೂ ಇದೆ.

'ದಶವಾರ್ಷಿಕ ಕವಿತೆಗಳು 1974-83' ಈಗಾಗಲೆ ಪ್ರಕಟವಾಗಿದೆ. ಇದರಿಂದ ಆಯ್ಕೆ ಮಾಡಿದ ಇಂಗ್ಲಿಷ್ ಆ್ಯಂಥಾಲಜಿಯೂ ಸಿದ್ಧವಾಗಿದೆ. ಇವೆರಡನ್ನೂ 1985ನೇ ಡಿಸೆಂಬರ್ 15ನೆಯ ತಾರೀಕು ಮೈಸೂರಿನಲ್ಲಿ ನಡೆದ **ಪ್ರಥಮ ವಿಶ್ವ ಕನ್ನಡ ಸಮ್ಮೇಳನದ** ಸಂದರ್ಭದಲ್ಲಿ, ಹೊಸದಾಗಿ ನಿರ್ಮಿತವಾದ ಕಲಾಮಂದಿರದಲ್ಲಿ ನಡೆದ ಉದ್ಘಾಟನೆಯ ಜೊತೆಯಲ್ಲೇ, ಕನ್ನಡ ಮತ್ತು ಸಂಸ್ಕೃತಿ ಸಚಿವ ಡಾ॥ ಜೀವರಾಜ ಆಳ್ವ ಅವರ ಅಧ್ಯಕ್ಷತೆಯಲ್ಲಿ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರು ಬಿಡುಗಡೆ ಮಾಡಿದರು. **ದಶವಾರ್ಷಿಕ**ಗಳ ಯೋಜನೆ ಸಂಪೂರ್ಣವಾಗಿ ಕಾರ್ಯಗತವಾದಲ್ಲಿ ಕನ್ನಡ ಸಾಹಿತ್ಯದ ಹಲವು ಮುಖಗಳ ಪರಿಚಯವನ್ನು ಕನ್ನಡೇತರರಿಗೆ ಮಾಡಿಕೊಡುವ ದಿಸೆಯಲ್ಲಿ ಒಂದು ಮೈಲಿಗಲ್ಲಾಗಬಹುದು. ಈಗಿನ ನಮ್ಮ ಘನ ಸರ್ಕಾರ ಇದಕ್ಕೆ ನೀಡುತ್ತಿರುವ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಪ್ರಸ್ತುತ, **'ಕವಿತೆಗಳು 1985'** ವಾರ್ಷಿಕ ಸಂಕಲನವನ್ನು ಶ್ರೀ ವೇಣುಗೋಪಾಲ ಸೊರಬ ಸಂಪಾದಿಸಿ ಕೊಟ್ಟಿದ್ದಾರೆ. ಕನ್ನಡ ಕಾವ್ಯ ಇತ್ತೀಚಿನ ದಿನಗಳಲ್ಲಿ ಹಿಡಿದಿರುವ ಗತಿಯನ್ನು ಇಲ್ಲಿನ ಕವಿತೆಗಳು ಪರೋಕ್ಷವಾಗಿ ಸೂಚಿಸುವುದರ ಜೊತೆಗೇ ಕವಿಯ ಬಹಿರ್ಮುಖ ಅನುಭವಗಳ ವ್ಯಾಪ್ತಿ ಮತ್ತು ವ್ಯುತ್ಪತ್ತಿಯ ಕಡೆಗೂ ತೋರುಬೆರಳಾಗುತ್ತವೆ. ನಮ್ಮ ಕವಿಗಳ ಆಸಕ್ತಿಯಲ್ಲಿನ ಸಮಾನತೆ ಹಾಗೂ ಅಭಿವ್ಯಂಜನೆಯ ವೈವಿಧ್ಯ ಹೊಗಳಿಕೆಗೆ ತಕ್ಕದ್ದಾಗಿದೆ. ಅಂತರ್ಮುಖತೆಯು ದ್ರವ್ಯ ತಕ್ಕ ಪ್ರಮಾಣದಲ್ಲಿ ಕೂಡಿಕೊಳ್ಳಬೇಕಾದ ಅನಿವಾರ್ಯವನ್ನೂ ಸೂಚಿಸುವುದು ಉಚಿತವೆನ್ನಿಸುತ್ತದೆ. ರೋಚಕತೆ, ಅನುಭವದ ವೈಯಕ್ತಿಕತೆಗಳನ್ನು ಮೀರಿದ ಸಾರ್ವತ್ರಿಕ ಚಹರೆಯ ಕಾವ್ಯ ನಮ್ಮ ಇವೊತ್ತಿನ ಸಾಹಿತ್ಯಕ ಅಗತ್ಯಗಳಲ್ಲಿ ಒಂದು ಎನ್ನುವ ಅಂಶ ಇಲ್ಲಿನ ಕವನಗಳ ಓದಿನಿಂದ ದೃಢಗೊಳ್ಳುತ್ತದೆ. **'ಕವಿತೆಗಳು 1985'**ರ ಸಂಪಾದಕರಿಗೆ ಅಕಾದೆಮಿ ಕೃತಜ್ಞವಾಗಿದೆ.

ಈ ಸಂಕಲನಕ್ಕೆ ಪೂರಕವಾಗಿ ಶ್ರೀಯುತರಾದ ಭಗವಾನ್ ಸಂಪಾದಿಸಿರುವ **'ಸಾಹಿತ್ಯ ವಿಮರ್ಶೆ : 1985'**. ವೀರೇಂದ್ರ ಸಿಂಪಿ ಸಂಪಾದಿಸಿರುವ

‘ಪ್ರಬಂಧ ಸಾಹಿತ್ಯ : 1985’, ಶ್ರೀಮತಿ ಬಿ. ಎಸ್. ರುಕ್ಕಮ್ಮ ಸಂಪಾದಿಸಿರುವ **‘ಮಕ್ಕಳ ಸಾಹಿತ್ಯ : 1985’** ಮತ್ತು ಶ್ರೀಕಂಠ ಕೂಡಿಗೆ ಸಂಪಾದಿಸಿರುವ **‘ಕಥೆಗಳು : 1985’** ಪ್ರಕಟಗೊಳ್ಳುತ್ತಿವೆ.

ಅಂದವಾದ ಮುಖಚಿತ್ರ ರಚಿಸಿದ ರಾ. ಸೂರಿ ಅವರಿಗೆ, ಹಾಗೂ ಮುದ್ರಿಸಿದ ಭಾರತಲಕ್ಷ್ಮೀ ಮುದ್ರಣಾಲಯದವರಿಗೂ ನನ್ನ ಕೃತಜ್ಞತೆಗಳು.

ಕೆ. ಎಸ್. ನಿಸಾರ್ ಅಹಮದ್

ಅಧ್ಯಕ್ಷರು

18-7-1986

ಕರ್ನಾಟಕ ಸಾಹಿತ್ಯ ಅಕಾದೆಮಿ,

ಬೆಂಗಳೂರು.

ಒಂದು ಮಾತು

"ಸಂಡೇ ಕಾವ್ಯ" ಎಂಬ ಮಾತಿಗೆ ಅಪಖ್ಯಾತಿಯು ಸೋಂಕಿದೆ. ಆ ಅಪಖ್ಯಾತಿಯನ್ನು ನಿವಾರಿಸುವ ದೃಷ್ಟಿಯಿಂದಲೇನೋ ಎಂಬಂತೆ ಕರ್ನಾಟಕ ಸಾಹಿತ್ಯ ಅಕಾದೆಮಿ ವರ್ಷದ ಆಯ್ದ ಕವಿತೆಗಳ ಸಂಗ್ರಹವನ್ನು ಪ್ರಕಟಿಸುವ ಯೋಜನೆ ಹಾಕಿಕೊಂಡು, ನಡೆಸುತ್ತಿದೆ. ಸಂಡೇ ಕಾವ್ಯವಲ್ಲದೆ, ಬೇರೆ ಯಾವುದೇ ಕಾವ್ಯ ಜನಸಾಮಾನ್ಯರನ್ನು ತಲಪುವುದೇ ಅಸಾಧ್ಯವೆನಿಸುವ ಸ್ಥಿತಿಯಿರುವಾಗ, ಕಾವ್ಯದ ಹಣೆಪಟ್ಟಿಯಲ್ಲಿ ದೋಷವೆಣಿಸುವುದು ತಪ್ಪೆಣಿಸಿದ ಹಾಗೆ ಆದರೆ, ಆಶ್ಚರ್ಯವಿಲ್ಲ. ಸಂಡೇ ಕಾವ್ಯ ಎನ್ನುವುದು ಸರಿಯೊ, ತಪ್ಪೊ, ಒಟ್ಟಿನಲ್ಲಿ. ಒಂದು ವರ್ಷದ ಅವಧಿಯಲ್ಲಿ ಪ್ರಕಟವಾದ (ಮಾಸಿಕ, ದ್ವೈಮಾಸಿಕ, ತ್ರೈಮಾಸಿಕಗಳೂ ಸೇರಿದಂತೆ) ಅಪಾರ ಕಾವ್ಯರಾಶಿಯಿಂದ ನನ್ನ ದೃಷ್ಟಿಗೆ 'ಸರಿ' ಎಂದು ಕಂಡುಬಂದ ಐವತ್ತೊಂದು ಕವನಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಮಾಡಿಕೊಟ್ಟ ಕರ್ನಾಟಕ ಸಾಹಿತ್ಯ ಅಕಾದೆಮಿಯ ಅಧ್ಯಕ್ಷರಾದ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಈ ಆಯ್ಕೆಯನ್ನು ಆಗುಮಾಡುವಲ್ಲಿ, ಉದಾರ ಮನಸ್ಸಿನಿಂದ ಅನುಮತಿಯನ್ನು ನೀಡಿದ ಹಿರಿ ಕಿರಿಯ ಕವಿಗಳೆಲ್ಲರಿಗೆ ನನ್ನ ಗೌರವಪೂರ್ವಕ ವಂದನೆಗಳು.

ಕಾವ್ಯ ಎನ್ನುವುದು ವಿಶಾಲಾರ್ಥವುಳ್ಳ ಪದ. ಜನರಂಜನೆಯನ್ನೇ ಧ್ಯೇಯವಾಗಿರಿಸಿಕೊಂಡಿರುವ ದೈನಿಕ ಇಲ್ಲವೆ ಸಾಪ್ತಾಹಿಕ ಪತ್ರಿಕೆಗಳು ಪ್ರಕಟಿಸುವ ಕಾವ್ಯ ಒಂದು ಸಾಹಿತ್ಯ ಚಳವಳಿಯನ್ನು ನಿರ್ದೇಶಿಸಬಲ್ಲವು ಎಂದು ಭಾವಿಸಿದರೆ ಅದೊಂದು ದೊಡ್ಡ ಭ್ರಮೆ. ಆದರೂ ನಮ್ಮ ಸಾಹಿತ್ಯ ಚಳವಳಿಯ ನೇತಾರರು, ಸಣ್ಣ—ಬಹು ಮಟ್ಟಿಗೆ ಸಾಹಿತ್ಯಕ—

ಪತ್ರಿಕೆಗಳಲ್ಲಿ ತಮ್ಮ ಧೋರಣೆಗಳನ್ನು ಪ್ರಸ್ತಾಪಿಸುತ್ತಾ, ದೊಡ್ಡ ಪತ್ರಿಕೆಗಳ ಮೂಲಕ ತಮ್ಮ ಕವಿತೆಗಳ ಪ್ರಕಟಣೆಗೆ ಅವಕಾಶ ಕಲ್ಪಿಸಿಕೊಳ್ಳುತ್ತಿರುವುದು, ಇಡೀ ಸಾಹಿತ್ಯ ಚಳವಳಿಯ ವಿಪರ್ಯಾಸವಾಗಿದೆ. ದೊಡ್ಡ ದೊಡ್ಡ ಬಂಡವಾಳಶಾಹಿಗಳಿಲ್ಲದೆ ದೊಡ್ಡ ಪತ್ರಿಕೆಗಳಿಲ್ಲ. ಆದ್ದರಿಂದ ಸಾಹಿತ್ಯ ಚಳವಳಿಗಳ ನೇತಾರರು—ವ್ಯವಸ್ಥೆಯ ವಿರುದ್ಧದ, ವ್ಯವಸ್ಥೆಯನ್ನು ಬುಡ ಮೇಲು ಮಾಡುವ ಚಳವಳಿಗಳ ನೇತಾರರು, ತಮ್ಮ ಅಭಿಪ್ರಾಯ ಮಂಡನೆಗೆ ದೊಡ್ಡ ಪತ್ರಿಕೆಗಳನ್ನೇ ಆಶ್ರಯಿಸುವುದು ಅಥವಾ ದೊಡ್ಡ ಪತ್ರಿಕೆಗಳ ಆಮಿಷಗಳಿಗೆ ಈಡಾಗುವುದು, ನೋವಿನ ಸಂಗತಿ. ಆದರೂ ಕೂಡ, ಪತ್ರಿಕೆಗಳು, ಸಾಂಸ್ಕೃತಿಕಕ್ಷೇತ್ರದಲ್ಲಿ ತಕ್ಕಮಟ್ಟಿನ ಜವಾಬ್ದಾರಿಯಿಂದ ವರ್ತಿಸಲು ಇಂತಹ ಬೆಳವಣಿಗೆಗಳು ಒಂದು ಅವಕಾಶವನ್ನು ಕಲ್ಪಿಸಿರುವುದು ಸಂತೋಷದ ಸಂಗತಿ. ಒಟ್ಟಿನಲ್ಲಿ ಪತ್ರಿಕೆಗಳು ಕೆಲವು ಬಾರಿ ಉತ್ತಮ ಕವಿತೆಗಳನ್ನು ಪ್ರಕಟಿಸಿ, ತಮ್ಮ ಆಯ್ಕೆಯ ಬಗ್ಗೆ ಸಮಾಧಾನಪಟ್ಟುಕೊಳ್ಳಬಹುದಾಗಿದೆ. ಆದರೆ ತಾವು ಪ್ರಕಟಿಸುವ ಸೃಷ್ಟ್ಯಾತ್ಮಕ ಬರಹಗಳಿಂದ ಒಂದು ಸಾಹಿತ್ಯ ಚಳವಳಿಯನ್ನೇ ಎತ್ತಿ ಹಿಡಿಯಬಲ್ಲೆವು ಎಂಬ ಭ್ರಮೆ ಪತ್ರಿಕೆಗಳಿಗೆ ಉಂಟಾಗದಿದ್ದರೆ, ಅದೇ ಒಂದು ಆರೋಗ್ಯಕರ ವಾತಾವರಣ ಉಂಟು ಮಾಡುವುದಕ್ಕೆ ಅನುಕೂಲವಾಗಬಲ್ಲದು.

ಪತ್ರಿಕೆಗಿಂತ ಕಾವ್ಯ ಮುಖ್ಯ. ಆದರೆ, ಯಾವುದೇ ಪತ್ರಿಕೆ ಒಂದು ಕವನವನ್ನು ಪ್ರಕಟಿಸಿದರೆ, ಅದಕ್ಕೆ ಒಂದು ವಿಶೇಷ ಧೋರಣೆ ಇದೆ ಎಂಬ ಭಾವನೆ ನಮ್ಮ ಸಾಹಿತ್ಯಾಸಕ್ತರಲ್ಲಿ ಇದೆ. ಆದ್ದರಿಂದ, ಅಂತಹ ಭಾವನೆಯ ನಿವಾರಣೆಗಾಗಿ ಈ ಮೇಲಿನ ಮಾತುಗಳನ್ನು ಬರೆಯಬೇಕಾಯಿತು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಇಂದು ಕನ್ನಡ ಸಾಹಿತ್ಯದಲ್ಲಿ ನಡೆಯುತ್ತಿರುವ ಚಟುವಟಿಕೆ ಯಾವುದೇ ಒಂದು ಗೊತ್ತಾದ ಮಾರ್ಗದಲ್ಲಿ, ಮಾರ್ಗದರ್ಶನದಲ್ಲಿ ನಡೆಯುತ್ತಿಲ್ಲ. ಇಂದು ಹಲವಾರು ಒಳಸುಳಿಗಳು ಉಂಟಾಗಿವೆ; ಅಂದರೆ, ಮುಂದಕ್ಕೆ ಸೆಳೆದು ಒಯ್ಯಬಲ್ಲಂತಹ ರಭಸದಿಂದ ಕೂಡಿದ ಹರಿವು ಇಲ್ಲ. ಆದ್ದರಿಂದಲೇ ಹಲವು ಕೇಂದ್ರಗಳಿಂದ ಚಟುವಟಿಕೆ ಕಂಡು ಬರುತ್ತಿದೆಯಾದರೂ ಒಂದೇ ಒಂದು ಪ್ರಭಾವಕಾರಿಯಾದ, ಉಳಿದ

ಎಲ್ಲವನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯವುಳ್ಳ ಒಂದು ಶಕ್ತ ಕೇಂದ್ರವಿಲ್ಲ. ಒಂದರ್ಥದಲ್ಲಿ. ಅದರಲ್ಲೂ ಕಾವ್ಯದ ದೃಷ್ಟಿಯಿಂದಲಂತೂ ಇದು ಬೀಳುಕಾಲ. ಹಲವಾರು ತಾತ್ವಿಕ ನಿಲವುಗಳು ; ಹತ್ತಾರು ಧೋರಣೆಗಳು : ವಿವರಣೆಯನ್ನೇ ಅವಲಂಬಿಸಿದ ಧಾತುಗಳು ; ಯಾವುದೇ ವಿವರಣೆಯನ್ನು ಧಿಕ್ಕರಿಸುವ ಸ್ರೋತಗಳು —ಹೀಗೆ ಹಲವು ರೀತಿಯ ಕಾವ್ಯ ಪ್ರಕಟವಾಗುತ್ತಿದೆ. ಆದರೆ ಕಳೆದ ಹತ್ತು ವರ್ಷಗಳಿಗೂ ಹೆಚ್ಚು ಕಾಲ ದಿಂದ ತನ್ನದೇ ನಿಶ್ಚಿತ ಧೋರಣೆ, ರೂಪ ಮತ್ತು ಅಂತಸ್ಸತ್ವವುಳ್ಳ ಕಾವ್ಯ ವೊಂದು ಪ್ರಕಟವಾಗಿಲ್ಲದಿರುವುದು ಗಮನಿಸಬೇಕಾದ ಸಂಗತಿ.

ಆ ವಿಷಯ ಹಾಗಿರಲಿ ; ಪ್ರಸ್ತುತ, ನಾನು ಸಂಪಾದಿಸಿರುವ ಈ ಸಂಕಲನದ ಕವನಗಳು ನನಗೆ ಸಂತಸ ತಂದಿವೆ. ಒಂದೊಂದು ಕವನವೂ ಬೇರೆ ಬೇರೆ ಕಾರಣಗಳಿಗೆ ಇಷ್ಟವಾಗಿದೆ. ಈ ಕವಿತೆಗಳು ವಿಭಿನ್ನ ಧೋರಣೆ ಹಾಗೂ ವಿಭಿನ್ನ ನೆಲೆಗಳಿಗೆ ಸೇರಿವೆ. ಇವುಗಳನ್ನು ಪೋಣಿಸುವಾಗ ಯಾವುದೇ ಒಂದು ತರ್ಕಬದ್ಧ ನಿಲವು ಕಂಡುಬರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಂತಹ ಸಂದರ್ಭದಲ್ಲಿ ಕವಿಗಳ ಹೆಸರಿನ ಅಕ್ಷರಾನುಕ್ರಮಣಿಕೆಯನ್ನು ಅನುಸರಿಸಿ ಇಲ್ಲಿನ ಕವಿತೆಗಳನ್ನು ಜೋಡಿಸಿದ್ದೇನೆ. ಈ ಕವಿತೆಗಳು ಓದುಗರಿಗೆ ಖುಷಿ ಯನ್ನು ಕೊಡುತ್ತವೆ ಎಂದು ಭಾವಿಸಿ ಇಂತಹ ಖುಷಿ ಜನಸಾಮಾನ್ಯರಲ್ಲಿ ವಿಸ್ತಾರವಾಗಿ ಹರಡಲಿ ಎಂದು ಹಾರೈಸುತ್ತೇನೆ.

ಕನಕಪುರ

3–3–1986

ವೇಣುಗೋಪಾಲ ಸೊರಬ

ಪರಿವಿಡಿ

ಅಮೂನಾ

—ಯು. ಆರ್. ಅನಂತಮೂರ್ತಿ

ಹುಳಿರುಚಿಯ ಹ್ಯಾಮ್‌ಪಿಕಲ್
ಕೋಸುಗಡ್ಡೆಯ ಸವರ್‌ಕ್ರೌಟ್, ಪ್ರಾಯಕ್ಕೆ ಬಂದ ನಯಮಧುರ
ಮದಿರೆ
ಇಡಿ ಗೋದಿ ಬ್ರೆಡ್, ಸ್ವಂತಿಕೆಯ ಜಾಮು
ಉಳಕೊಂಡಿವೆ ಜಾಹೀರಾತಾಗಿ, ಟೂರಿಸ್ಟರಿಗೆ
ಸರಸ ಸಂಭಾಷಣೆಯಾಗಿ,
ಸೂಪರ್ ಮಾರ್ಕೆಟ್ಟಿನಲ್ಲೂ ಸ್ವಲ್ಪ ದುಬಾರಿಯೆನಿಸುವ ಬೆಲೆಗೆ
ಸಿಗುವ ವಸ್ತುಗಳಾಗಿ.

ಕೊನೆಯ ಧರ್ಮಭೀರು, ಸ್ವಯಮಾಚಾರ್ಯ ದೈವಜ್ಞನ
ದಿನಚರಿ, ಜಪದ ಸರ, ಪಟ, ಪೆನ್ನು, ದೀಪ,
ಓಕ್‌ಮರದ ಭರ್ಜರಿ ಮೇಜು
ಇವೇ ಮ್ಯೂಸಿಯಂನಲ್ಲಿ;
'ಮತ್ತೊಬ್ಬ ಹುಟ್ಟಿಲ್ಲ ಇವನೆ ಕೊನೆ'
ಎನುತ್ತದೆ ಸ್ಲೈಡ್ ಶೋ ಮೃದು ಸ್ವರದಲ್ಲಿ,

ನೂರಕ್ಕೂ ಹೆಚ್ಚು ವರ್ಷದ ಹಿಂದೆ ಜರ್ಮನಿಯಿಂದ ಇವರು
ಬಂಡಾಯ ಎದ್ದು ಬಂದದ್ದು:
ಸರಳತೆಗಾಗಿ, ಭಗವಂತನ ಜೊತೆ ನೇರ ಸಂಪರ್ಕಕ್ಕಾಗಿ

ಚರ್ಚಿನ ಡಂಭಾಚಾರದ ಶತ್ರುಗಳಾಗಿ, ಸಂತ್‌ಸಂಗದಲ್ಲಿ
ಕೂಡಿ ಉಂಡು, ಕೂಡಿ ಬದುಕಿ, ಕೂಡಿ ದುಡಿದು
ಕೊನೆಯಲ್ಲಿ ಅವನನ್ನು ಕೊಡಲಾಗಿ.

ಈಗಲೂ ಮಕ್ಕಳಿಗೆ ಜರ್ಮನ್ ಕಲಿಸುವುದುಂಟು
ಅದನ್ನು ಮರೆಯುತ್ತಿರುವ ಮುದುಕರ ನೆಮ್ಮದಿಗಾಗಿ.

ಮತ್ತು ತಮ್ಮಂತೆ ಊರಲ್ಲಿ ಜರ್ಮನರೂ, ಕೋಕಕೋಲಾ
ಕುಡಿಯುವುದರಿಂದ
ಬಂಡಾಯವೆಂದರೆ ಅಣ್ವಸ್ತ್ರ ವಿರೋಧ, ನಿಕರಾಗುವಾಗೆ ರಕ್ತತರ್ಪಣ,
ಕೈಬಾಯಿ ಕಚ್ಚೆಗಳ ಪೂರ್ಣಶುದ್ಧಿ
ಇತ್ಯಾದಿ ಇತ್ಯಾದಿ ಉಪದ್ವ್ಯಾಪಗಳಲ್ಲಿ
ಬದುಕುವ ಪರಿಯೇ ಮ್ಯೂಸಿಯಂ ಆಗಬಹುದಾದ್ದರಿಂದ
ಕೊಟ ಜೀವನ ಈಗ ಉಳಿದಿರೋದು:
ಒರಟು ಬೆಂಚಿನ ಮೇಲೆ ಕೂತು ಪ್ರಾರ್ಥಿಸುವಾಗ
ಸತ್ತವರನ್ನು ಅನುಕ್ರಮವಾಗಿ, ಸಾಲಾಗಿ, ಹೂಳುವಾಗ.

ಇದು ಯಾರ ' ಕಥೆಯಲ್ಲ—ಹೇಳಿ.

ಮುಜುಗರ

—ಅಬ್ದುಲ್ ಮಜೀದ್ ಖಾ಼

ನಾ ಬರೆದ ಎಷ್ಟೋ ಪತ್ರಗಳು
ತಲುಪದೇ ಹೋದವಂತೆ ಸಂಬಂಧ ಪಟ್ಟವರಿಗೆ.
ಅಸೂಯೆ ಕಾರುವವರ ಕೈಗೆ ಹತ್ತಿರಬೇಕು
ಅಥವಾ ಕುತೂಹಲಿ ಅಂಚೆ ಪೇದೆಗಳ ಬೇಸರಕ್ಕೆ
ತಕ್ಕ ಪರಿಹಾರವಾಗಿರಬಹುದು.
ಹಾಗೇ, ನನಗೆ ಬರಬೇಕಾಗಿದ್ದ ಎಷ್ಟೋ ಓಲೆಗಳು
ನನಗೆ ಮುಟ್ಟಿಸಬೇಕಾದ ಸಂದೇಶ, ಆರೋಪ ಮತ್ತು
ಮುತ್ತು (?) ಗಳ ಮಹತ್ವ ತೀವ್ರತೆ ಕಾವುಗಳನ್ನೆಲ್ಲ
ನಡುದಾರಿಯಲ್ಲೇ ಚೆಲ್ಲಿರಬೇಕು.
ಆಗದವರೋ, ಅನಾಮಿಕರೋ, ಓದಿ, ಮರ್ಮಗಳ
ತಿಳಿದು ಬೆಳೆದು, ಉಬ್ಬಿ ಕೊಬ್ಬಿ, ಕೊನೆಗೆ
ಒಲೆ ಹೊತ್ತಿಸಿ ಟೀ ಕುದಿಸಿ ಕುಡಿದಿದ್ದರೆ
ಬಲು ನಿಶ್ಚಿಂತೆ ನನಗೆ. ಅಥವಾ ತಲೆ ಮರೆಸಲೂ
ಛಾವಣಿ ಇಲ್ಲದವರು ಚಳಿ ಕಾಯಿಸಿಕೊಂಡರೆ
ಪರಮ ಸಂತೋಷ. ಅದಕ್ಕಿಂತಲೂ
ನಾ ಕಳಿಸಿದ ಟಪ್ಪಾಲು ಹಲವೊಮ್ಮೆ ಮರಳಿ
ನನಗೇ ವಾಪಸ್ಸಾಗುವಂತೆ, ಮಹತ್ವ ಪತ್ರಗಳೂ
ಅಂಚೆಯು ಅಂಥದೇ ಉದಾಸೀನತೆಗೆ ಅಥವಾ
ದುರವಸ್ಥೆಗೆ ಗುರಿಯಾದರೆ, ನನಗೆ ತುಂಬ
ತುಂಬಾ ಸಮಾಧಾನ!

ಜಂಕ್ಶನ್ ಕವಿತೆ ೧

—ಅರವಿಂದ ನಾಡಕರ್ಣಿ

ಈ ಜಂಕ್ಶನ್ನೇ ಬೇರೆ.
ಇತರೆಡೆ ಬಂದವರು
ಪೊದೆಮೀಸೆ ತಂದಿ ಮಾತ್ರ ಅದುರುವಂತೆ
ಒಂದೆರಡು ನುಡಿಮುತ್ತು
ಕೈಯಲ್ಲೊ ಕಿಸೆಯಲ್ಲೊ ಚೊಕಲೇಟಿನಂತಿಟ್ಟು
ಬಾದರಾಯಣ ಸಂಬಂಧದಿ ಬೆನ್ ತಿರುಗಿಸಿ ಹೋದವರು,
ಕೂಲಿತಲೆಗೆ ಸಾಮಾನು ಹೇರಿ ಯಾವ ಸುಡುಗಾಡಿಗೋ.
ಖಾಲಿ ವರ್ತುಳದಲ್ಲಿ ಥೇಟು ಅವರಂತೆ ಇನ್ನೊಬ್ಬರು
ಮಗುದೊಬ್ಬರು . . . . . .
ಇಂಥ ಜಂಕ್ಶನ್ನಿದಲ್ಲ.
ಇಲ್ಲಿ ವರ್ತುಳ ಭರ್ತಿಯಾಗಿ ಬೆಳೆಯುವದು
ಎಂದೂ ಖಾಲಿಯಾಗುವುದಿಲ್ಲ.
ತಗಲಿದ್ದು ಅಗಲುವದಿಲ್ಲ. ಅಂಟಿದ್ದು ಸಡಿಲುವುದಿಲ್ಲ
ಬಂದದ್ದು ಬೇರೂರಿ ಬಿಳಿಲು ಬಿಳಲಾಗಿ ದೊಡ್ಡಾಲ
ಇಲ್ಲಿ ನುಡಿಯುವವು ನಾಲಿಗೆಯಲ್ಲ
ಮಿಡಿ ಮಿಡಿವ ಎದೆಗಳು
ಇಲ್ಲಿ ಸರಿಯುವವು ದಿನಗಳಲ್ಲ
ಹಡೆ ಹಡೆವ ಕ್ಷಣಗಳು

ಇಲ್ಲಿ ಬೆಳಗುವವು ದೈವಗಳಲ್ಲ
ಮಾತೆಯು ಕೈದೀಪಗಳು.
ಬನ್ನಿ ಸಾರ್
ಈ ಜಗತ್ ಜಂಕ್ಯನ್ನಿಗೆ ಬನ್ನಿ.

ಹರಿತ ಕತ್ತಿಯ ಧಾರೆಯಂತೆ ತುಳಿಯುವ ದಾರಿ

—ಕಯ್ಯಾರ ಕಿಞ್ಞಣ್ಣ ರೈ

ಆತ್ಮನಂ ರಥಿಕನೆಂದರಿವುದು, ಶರೀರವನು
ರಥವೆಂದು ನಚಿಕೇತ ನೀನೆಣಿಪುದು ;
ಬುದ್ಧಿಯಂ ವಿದ್ಧಿ ಸಾರಥಿಯೆಂದು, ಮನವನ್ನು
ಕಡಿವಾಣವೆಂದರಿತುಕೊಂಡಿರುವುದು.

ಇಂದ್ರಿಯಗಳಂ ಹಯುಗಳೆನ್ನುವರು ತಿಳಿದವರು,
ಗೋಚರಗಳವುಗಳಿಗೆ ವಿಷಯಂಗಳು ;
ದೇಹವಿಂದ್ರಿಯ ಮನಸ್ಸುಗಳಿಂದ ಕೂಡಿರುವ
ಆತ್ಮನಂ ಭೋಕ್ತೃವೆಂದೆನ್ನುತಿಹರು.

ಆವನೆಂದೆಂದಿಗುಂ ತಡೆಹಿಡಿದಿರುವ ಮನದಿ
ತಿಳುವಳಿಕೆಯುವನೆನೆ ಪೆಸರ್ವಡೆದನು,
ಇಂದ್ರಿಯಂಗಳವಂಗೆ ವಶ್ಯವೆನಿಪುವು ನಿಜದಿ
ಉತ್ತಮಾಶ್ವಗಳ ಸಾರಥಿ ಹೊಡೆವನು.

ಮತಿಯ ಸಾರಥಿ ಮಾಡಿ, ಮನವ ಹಗ್ಗವ ಮಾಡಿ
ಆವ ನರ ನಡೆಸುವನು ಮುನ್ನಡೆವನು,
ಅವನು ಯಾತ್ರೆಯ ಪಾರಗಾಣುವನು, ಕೃಪೆಗೂಡಿ
ವಿಷ್ಣುವಿನ ಪರಮಪದವಂ ಪಡೆವನು.

*   *   *   *

ಏಳಿ ಎಚ್ಚರಗೊಳಿರಿ! ಶ್ರೇಷ್ಠರಂ ಸೇರುತಲಿ
ತಿಳಿದುಕೊಳ್ಳಿರಿ ನೆಲೆಯನಾತ್ಮನಿರವಂ ;
ಹರಿತ ಕತ್ತಿಯ ಧಾರೆಯಂತೆ ತುಳಿಯುವ ದಾರಿ
ಕಷ್ಟವೆಂಬರು ಬಲ್ಲವರು ಗಮ್ಯವಂ.

ಕೇಳದಿಹ, ಕಾಣದಿಹ, ಮುಟ್ಟದಿಹ, ಮೂಸದಿಹ,
ಸವಿಯದಿಹ, ಸವೆಯದಿಹ, ತುದಿಮೊದಲಿರದಿಹ,
ಹಿರಿದರಿಂದಾಚೆಗಿಹ, ಚಲಿಸದಿಹ ಬ್ರಹ್ಮವನು
ತಿಳಿದವನು ಮೃತ್ಯುಮುಖದಿಂ ಮುಕ್ತನು.

---

* ಕಯ್ಯಾರರ ಐದು ಉಪನಿಷತ್ತುಗಳ ಕನ್ನಡ ಕಾವ್ಯಾನುವಾದ ಕೃತಿ 'ಪಂಚಮೀ' ಯಿಂದ ಉದ್ಧೃತ ಭಾಗ.

ಅಹಲ್ಯೆ

—ಕೇಶವ ಮಳಗಿ

ಚೈತ್ರ ಮಾಸದಲಿ
ಹಚ್ಚ ಹಸಿರಿನ ಕಾನನದ ಮಧ್ಯೆ
ಋಷ್ಯಾಶ್ರಮದಲಿ
ಭಾವನೆ : ಬಯಕೆಗಳಲಿ ನಡುಗುತ ಮಿಂದು
ಬಸಿರಾಗಿ, ಪ್ರಸವ ವೇದನೆಯಲಿ ನರಳಿ
ಸುಂದರ ಸ್ವಪ್ನವನು ಹೆತ್ತೆ.
ಕನಸಿಗೂ—ವಾಸ್ತವಕೂ
ನಿರಂತರ—ಅಜಗಜಾಂತರ ಭೇದ.
ವಾಸ್ತವ : ಗೌತಮ
ಕನಸೋ : ಇಂದ್ರ ಭಾವನೆಯುಕ್ಕಿಸುವ ಚಂದ್ರ
ಅದಕ್ಕೆಂದೇನೊ ಅದನ್ನು ಬಿಡದೆ, ಇದನ್ನು
ಅರಗಿಸಿಕೊಳ್ಳದೆ
ಸೌಂದರ್ಯವ ತ್ಯಜಿಸಿ
ಕಲ್ಲಾಗಿ—ಭಗ್ನ ಶಿಲೆಯಾಗಿ ಕುಳಿತು ಬಿಟ್ಟೆ.

ಗಾಂಧಿ—1985

— ಗೋಪಾಲಕೃಷ್ಣ ಅಡಿಗ

ಆದರ್ಶರಾಜ್ಯಕ್ಕೆ ತಾನೇ ಮೈಯಾಗ ಬಯಸಿ ಬಂದಿಳಿದವನು
ಮಹಾತ್ಮ ಗಾಂಧಿ, ಕನ್ನಡಿಯಾಚೆ ಎಂಥ ಗಂಟು!
ಕಲ್ಲು ಹೊಡೆಹೊಡೆದು ಕನ್ನಡಿಯನಷ್ಟೂ ಚೂರು
ಚೂರು ಮಾಡಿದೆವಯ್ಯಾ ಕಷ್ಟಪಟ್ಟು.

ದಕ್ಕಿದ್ದು ಗಂಟಲ್ಲ, ಲಕ್ಷೋಪಲಕ್ಷ ಎಳೆಗಳ ಸಿಕ್ಕು
ಕಗ್ಗಂಟು. ನಮ್ಮ ಗಂಟಲಿನ ಸುತ್ತ
ಯಮಪಾಶ ಮಾಡಿ ಹಿಡಿದಿದ್ದಾರೆ ನೋಡಿದಿರ
ಪ್ರತಿಗಾಂಧಿಗಳ ಕರಾಮತ್ತು?

ಕಲ್ಲು ಕನ್ನಡಿ ಚೂರು ಸಿಮೆಂಟು ಕಾಂಕ್ರೀಟಲ್ಲಿ
ಗಾಂಧಿ ಪ್ರತಿಗಳ ಕೆತ್ತಿ ಕೆತ್ತಿ ನಿಲಿಸಿದ್ದೇವೆ
ಕಾಕಪಿಷ್ಟ ಪಾತ್ರೆಗಳಂತೆ ಪಾರ್ಕು ಚೌಕಗಳಲ್ಲಿ.
ಪೂಜಿಸುತ್ತೇವೆ ವರ್ಷಕ್ಕೊಂದು ಬಾರಿ
ಕಲ್ಲು ಚಲಿಸೀತೇನೊ ಎಂದು ಹೆದರಿ.

ಆದರ್ಶ ರಾಜ್ಯಕ್ಕೆ ತಾನೇ, ತನ್ನ ದೇಹ ದೇಶಗಳೇ
ಮೈಯಾಗಬೇಕೆಂದು ಪಟ್ಟು ಹಿಡಿದು
ಹೂಡಿ ಹೊಡೆದರು ಗಾಂಧಿ ಮನಸ್ಸು ದೇಹಗಳನ್ನು ನೊಗಕ್ಕೆ—
ಕಸಲೆ ನಸನಾಗಿ, ನೆಲವೆಲ್ಲ ನಂದನವಾಗಿ

ಪ್ರತಿಯೊಬ್ಬನೂ ಇಲ್ಲಿ ದೇದೀಪ್ಯಮಾನ ದೇವತೆಯಾಗಿ
ಕತ್ತಲಿನ ಕಳೆ ಕಿತ್ತ ಹೊಲಗದ್ದೆಗಳ ತುಂಬ
ಕೆಡದ ಕೊಳೆಯದ ಶುದ್ಧ ಬೆಳಕುಗಳ ಫಸಲು—
ಸಂಕಲ್ಪದ ಮಹಾಸೌಧ, ಹುಂಬ ನಂಬುಗೆಯು ಅಡಿಗಲ್ಲು !

– ೨ –

ಖಗೋಳ ಭೂಗೋಳಗಳ ಮಧ್ಯದಲ್ಲಿ ಇದೆ
ಅದೃಷ್ಟ ಲೋಕದ ಅಗೋಚರದ ಘೋರ :
ತಯ್ಯಾರಾಗುತ್ತಲಿದೆ ಅಲ್ಲಿ ದಿನ ದಿನಕ್ಕೊಂದು ಅಸ್ತ್ರವಿಕಾರ,
ಗುಡುಗು ಸಿಡಿಲುಗಳ ಭಾರಿ ಭಾರಿ ಶಸ್ತ್ರಾಗಾರ,
ಅಹಿಂಸೆ ಮುಸುಕಿನೊಳಗೆ ಹಿಂಸಾಕೃತಿಗೆ ಗೂಢ ತಾಲೀಮು ;
ಸರದಿ ಕಾಯುತ್ತಿರುವ ರಾಕ್ಷಸತ್ವದ ಕವಾತು.

ಆಗಿ ಬಂದದ್ದಲ್ಲ ಮನುಷ್ಯತ್ವ, ಆಗಬೇಕಾದದ್ದೂ—
ಇಂದಲ್ಲ, ನಾಳೆ ಅಥವಾ ಇಲ್ಲಿ ಯಾವಾಗಲೋ.
ಗಾಂಧಿ ಕೂಡ ದೇವಮಾನವರಾಕ್ಷಸರ ತ್ರಿಪುಟ ಸಂಕೀರ್ಣ
ಈ ಇಲ್ಲಿ ಎಲ್ಲವೂ ಅಪೂರ್ಣ.
ಪೂರ್ಣತೆಯು ಕನ್ನಡಿ ಮುಂದೆ ಅಪೂರ್ಣದಂಗಕ್ಷೇಪ ;
ಕನ್ನಡಿ ಒಡೆಯಿತೋ ಆಗ ರಾಕ್ಷಸದ ಪ್ರಕೋಪ.
ಚಿಪ್ಪೊಡೆದರೆ ಮಾತ್ರ ದೈವಿಕತೆ ಕೇವಲ,
ಇಲ್ಲವೋ ಎಲ್ಲವೂ ಅರಕೆ ಬೆರಕೆ,
ಗಾಂಧಿಯಾದರೆ ಏನು ಬುದ್ಧನಾದರೆ ಏನು
ಮುಕ್ಕು ಮುಕ್ಕೇ, ಬರಿಯ ಅರಕೆ ಬೆರಕೆ !

– ೩ –

ಚಿಪ್ಪೊಡೆದು ಹೊರಬಿದ್ದು ಝೇಂಕರಿಸಿದರು ಗಾಂಧಿ,
ತಾಳಲಯ ಶುದ್ಧ ಸಂಗೀತವಾಗಿ ;
ಸಮೂಹದ ಅಪಸ್ವರದ ಅಸಂಗತದ ಹೊಯ್ಲಲ್ಲಿ

ಕೊಚ್ಚಿ ಹೋಯಿತು ಹಾಡು, ನನಗಾಗಿ, ನಾನು ಹಾಡಾಗಿ
ಹಾಡಬಹುದಷ್ಟೆ, ನಿಮಗಾಗಿ ; ನಿಮ್ಮ
ಹಾಡಾಗಲಾರೆ, ಅದು ನಿಮ್ಮ ಪ್ರಾರಬ್ಧ !
ಸಮೂಹಕ್ಕಾಗಿ ಸಾಯಬಹುದಷ್ಟೆ, ಬದುಕುವುದು ಕಷ್ಟ.
ಇಷ್ಟವೇ ಅನಿಷ್ಟ, ಅನಿಷ್ಟವೇ ಇಷ್ಟ.
ಇಂಥ ವೈವಿಧ್ಯವೇ ಸೃಷ್ಟಿಕೊಡುವ ಸಂಕಷ್ಟ.

ಅಹಿಂಸೆ ಹಿಂಸೆಗಳ ದ್ವಂದ್ವದಾಚೆಗಿದೆ ದಾಂತಿ,
ಸಾವಿನಲ್ಲೇ ಬದುಕು ಹೊಳೆಯುವ ಪ್ರಶಾಂತಿ.
ಅತ್ತಕಡೆ ಪಯಣಕ್ಕೆ ಎಷ್ಟು ಭವ ಬೇಕು ?
ಗಾಂಧಿಗೊಂದೇ ಸಾಕು, ನಿಮಗೆಷ್ಟು ಹೇಳಿ.
ಅಹಿಂಸೆಯ ಹೆಸರಿನಲ್ಲಿ ಎಷ್ಟೊಂದು ಹಿಂಸೆ !—
ಹೆಂಡತಿಗೆ, ಮಕ್ಕಳಿಗೆ, ಆಶ್ರಮಸ್ಥ ಪರಿಜನಕೆ
ಹುಂಬರಿಗೆ, ಡೊಂಬರಿಗೆ ಆಡಂಬರದ ವೀರರಿಗೆ
ನರಪೇತಲರಿಗೆ ಉದ್ವೇಗ ಪರಾಧೀನರಿಗೆ, ದೀನರಿಗೆ
ಸೋಡಾಬಾಟ್ಲಿಗ್ಯಾಸಿನಾದರ್ಶವಾದಿ ಭ್ರಾಂತರಿಗೆ ;
ಇಹಪಥ ಶ್ರಾಂತರಿಗೆ, ನರತ್ವ ಬಿಟ್ಟ ವಿಶ್ರಾಂತರಿಗೆ !
ಹಿಂಸೆ ಕೊಟ್ಟು ಪಟ್ಟು ಅಹಿಂಸೆಯಾಟವಾಡಿದ್ದಕ್ಕೆ
ಹಿಂಸೆಗೊಂದುತ್ಕೃಷ್ಟ ತುತ್ತಾಗಿ ಬಿಟ್ಟರು ಗಾಂಧಿ
ಎತ್ತಲೋ ಸಾಗಿತ್ತು ಅವರ ನೌಕೆ.
ಈಗ ನೋಡಿರಿ ಇಲ್ಲಿ ಭಯೋತ್ಪಾದಕರ ಭರಾಟೆ
ಇಲ್ಲಿ ಕತ್ತಿ ಕಠಾರಿ, ಅಲ್ಲಿ ಪಿಸ್ತೂಲು ಬಾಂಬು ;
ಎಲ್ಲಿ ನೋಡಿದರಲ್ಲಿ ಕೊಲೆ ಹಾಡು ಹಗಲೇ.
ಅದುಮಿಟ್ಟ ಹಿಂಸಾರತಿಗೆ ಬಂದಿದೆ ಮಹಾಪೂರ,
ಕತ್ತರಿಸಿ ಕುಣಿಯುತ್ತಾನೆ ಭಾರತದ ವೀರ
ಗಂಗೆಯನ್ನೇ ಮಲಿನಗೊಳಿಸಬಲ್ಲ ವಿಕಾರ
ತಡೆಯ ಬಲ್ಲದೆ ಗಾಂಧಿ ಭಾರ ? ಅದಕ್ಕಾಗಿ ತಂದಿದ್ದೇವೆ

ಹೊಸ ಗಾಂಧಿಗಳ ಫಸಲು ; ಇಂದಿರಾ ಗಾಂಧಿ,
ಸಂಜಯ ಗಾಂಧಿ, ರಾರಾಜಿಸುವ ರಾಜೀವ ಗಾಂಧಿ.
ಗಾಂಧಿ ಸತ್ತರು ಗಾಂಧಿ ಬಿಡಲಿಲ್ಲ ನಾಡ.
ಅವರ ಹೆಸರೇ ಸಾಕು, ಅವರೇ ನಮಗೆ ಬೇಡ.
ನಾಮ ಜಪದ ಮಾಹಾತ್ಮ್ಯ—ಬಲ್ಲವನೇ ಬಲ್ಲ.

– ೪ –

ಅಲ್ಲಿ ಸಲ್ಲುವುದಿಲ್ಲಿ ಸಲ್ಲುವುದಿಲ್ಲ ; ಅದೇ ದುರಂತ.
ಅಶ್ವತ್ಥಾಮ ಸತ್ತನೆಂದೊದರಿ ಬಳಿಕ
"ಆನೆ ಆನೆ" ಎಂದು ಪಿಸುಗುಟ್ಟಿ ಯುಧಿಷ್ಠಿರ ಬರೀ
ತಿಪ್ಪೆ ಸಾರಿದರೇನು ಬಂತು ಹೇಳಿ.

ಇಲ್ಲಿ ಇರುವುದು ಬರೀ ಸ್ಥಿರೆಯಲ್ಲ, ಜೀವನವೂ ಅಲ್ಲ,
ತಿಂದು ತೇಗುವ ಅಗ್ನಿ ಅಷ್ಟೇ ಅಲ್ಲ ;
ದಿಗ್ದೇಶಗಳ ನಾತ ತರುವ ಗಾಳಿಮಾತ್ರವೂ ಅಲ್ಲ ;
ತಲೆ ಮೇಲೆ ಬಾಗಿರುವ ನೀಲಿ ಕೂಡ.
ತನ್ನ ಭಾರೀ ಸೊನ್ನೆಯೊಳಗಿಂದಲೇ ಲಕ್ಷ ಲಕ್ಷ
ದೇಖಾವೆಗಳ ತೆರೆದು ತೋರಿಸಿ ಸುಟ್ಟು
ಸುಗಿದು ಕಂಬನಿ ಧಾರೆ ಸುರಿಸಿ ತಣಿಸುವ ಮಹಾ
ಶೂನ್ಯ ಕೂಡ.
ಇದು ಯುಧಿಷ್ಠಿರನಿಗಲ್ಲ. ದುರ್ಯೋಧನನಿಗಂತೂ ಅಲ್ಲ,
'ಸಮಕಾಯ ಶಿರೋಗ್ರೀವ'ನಿಗೆ ಮಾತ್ರವೇ,
ಸಲ್ಲರಯ್ಯಾ ಇಲ್ಲಿ ಏಕತಾಲಿ, ಭೇರಿ, ನಗಾರಿ ಕೊಂಬು ಕೂಡ ;
ಮೇಳಗಾನದ ಸನ್ನೆಗೋಲು ಹಿಡಿದಾಡಿಸುವ
ಸೂತ್ರಧಾರಿಗೆ ; ಗೃಹಸ್ಥ ಸನ್ಯಾಸಿಗೆ ;
ಸದಾ ಶಸ್ತ್ರಸನ್ನದ್ಧ ಅಹಿಂಸಾಪರನಿಗೆ.
ಕಂಬನಿಯ ಸುರಿಸುತ್ತಾರುವ ಪರಮಸುಖಿಗೆ
ದುಷ್ಟರನ್ನೊರಸಿ ತೆಗೆಯುವ ಶಿಷ್ಟ ಕಸಬರಲಿಗೆ,

ಆಕಾಶದ ಮಹಾಶೂನ್ಯ ಲಕ್ಷ್ಯವಾದರು ಕೂಡ
ಕಾಯಕವೇ ಕೈಲಾಸವೆಂದಾಡುವಾತನಿಗೆ, ಹಾಗೆ
ದುಡಿವ ಕಲಿಗೆ.
ನೆಲದ ಜಾರಿಕೆಯಲ್ಲು ನಡೆಗಲಿವ ಕುಶಲಿಗೆ ; ಜಾರಿ
ಬಿದ್ದರೂ ಎದ್ದೆದ್ದು ನಡೆವವನಿಗೆ.

ಇದು ದುರಂತ ಕಣಯ್ಯ ; ಸುಲಭ ಸರಳಕ್ಕೆ ಇಲ್ಲೆಡೆಯಿಲ್ಲ ;
ತೂಕ ಸಮನಾಗಿಸುವ ಕಪಿರಾಯರಿಗೆ ಮಾತ್ರ
ಅವಕಾಶ ಈ ಇಲ್ಲಿ ಈ ಬಾನ ಕೆಳಗೆ.
ಇಲ್ಲಿ ಬೆಣ್ಣೆ, ಫಳಾರ, ಅಲ್ಲಿ ಕೊಂಬೆಗೆ ಜಿಗಿತ,
ಇಲ್ಲಿ ಕಾಮನ ಹಬ್ಬ, ಅಲ್ಲಿ ಕಾಮನ ದಹನ ;
ಗೋಡ್ಸೆ, ಗಾಂಧಿಯರ ನಡುವೆ ಎಂಥ ಸಮತೂಕ !

ಕಪ್ಪೆ ಮತ್ತು ಹಾವು

—ಗಂಗಾಧರ ಚಿತ್ತಾಲ

ಕಪ್ಪೆಗೂ ಗೋತ್ತು ಹಾವಿಗೂ ಗೊತ್ತು
ಗಂಟು ಬಿತ್ತಲ್ಲಾ ನಮಗಿಬ್ಬರಿಗೂ ಇದೀಗ ಅಕಸ್ಮಾತ್ತು
ಅದಕ್ಕೆ ಒಂದೇ ಕೊನೆ ಒಂದೇ ಮುಕ್ತಾಯ
ಇಲ್ಲವೊ ಬೇರೆ ಉಪಾಯ

ಹಾವಿನ ಕಣ್ಣಿಗೆ ಬಿತ್ತಲ್ಲಾ ಕಪ್ಪೆ
ಆಗಲೇ ಅದರಾಟ ಮುಗಿದಿತ್ತು.
ಹಾವಿಗೆ ಕಪ್ಪೆಯೆ ತುತ್ತು.
ಅದುವೇ ನಿಯತ್ತು.

ಆದಕೆಂತಲೆ ಸಾರುತ್ತಿದೆ, ಸುಂದರ ಸುಭಾಷಿತ ಸೂಕ್ತ:
ಜೀವಃ ಜೀವಸ್ಯ ಜೀವನಮ್:
ಜೀವಕ್ಕೆ ಜೀವವೇ ಆಹಾರ,

ಆಧಾರ.
ಇದು ಜೀವಕೋಟಿಗಳ ಹತೋಟಿಯಲಿಡಲು
ಅದ್ಭುತ ಸೃಷ್ಟಿಕ್ರಮ.

ಅಮಮ!
ಅಗೊ ಎದುರಿಗೇ ಪೊದೆಗಳ ಮರೆಗೇ
ನಡೆದಿದೆ ದಿನದ ಕೊಲೆ.

ಹಾವಿನ ದವಡೆಗೆ ಸಿಕ್ಕಿದ ಕಪ್ಪೆಯು
ಆರ್ತ ಮೊರೆ.
ಎಂಥ ಕ್ರೌರ್ಯ, ಎಂಥ ಹಿಂಸೆ.
ಮರಳಿ ಮರಳಿ ಮರುಗಿದರೂ
ಯಾರೂ ಕೇಳದ ಕರೆ!

ಆ್ಯಂಟೆನಾ ಮತ್ತು ಗುಬ್ಬಿ

—ಚಂದ್ರಶೇಖರ ಪಾಟೀಲ

ಸುತ್ತೆಲ್ಲ ಮಬ್ಬು ಮಬ್ಬು
ತಲೆಯು ಮಬ್ಬಿನ ಹಾಗೆ,

ದೂರದರ್ಶನ ಚೌಕುಮುಖದಲ್ಲಿ
ಸಮುಸಮೀಪವೇ ಬಂದು
ಕಣ್ಣಿಗೆ ತಿವಿಯುವ
ಕಪ್ಪು ಕಪ್ಪು ಮುಖವ ಬಿಳಿ ಬಿಳೀ
ಪಿಳಿ ಪಿಳಿ ಕಣ್ಣು

ಇಥಿಯೋಪಿಯದ ರಣಬಿಸಿಲಲ್ಲಿ
ಹೆಣವಾಗಿ ಜೋತಾಡುವ
ಜೀಕಾಡುವ
ನೆರಳುಗಳೆಲ್ಲ ಮೈತುಂಬ ಹರಿದಂತಾಗಿ
ಒಸಡಿಯಲ್ಲಿ ಸಿಕ್ಕ ಚಾಕಲೇಟು
ಹಲ್ಲಿಗೇ ಅಂಟಿ,
ಕುಂತ ಸೋಫಾ ಕೂಡ
ಮುಳ್ಳು ಕಂಟಿ.

ಒಂದೈದು ಮಿನಿಟಿನ ಹಿಂದೆ
ಇದೆ ಇದೇ ಚೌಕುಮುಖದಲ್ಲಿ

ರಾಜೀವಗಾಂಧಿಯ ಮುಖಕಮಲ ಅರಳಿ
ಸುತ್ತಲಿನ ಕೆಸರಲ್ಲಿ
ಚೆಂದಾಗಿ ಮೂಡಿತ್ತಲ್ಲ ....

ಒಮ್ಮಿಂದೊಮ್ಮೆ
ಚೌಕು ಮುಖ ಮುದುಡಿ ಸಿಕ್ಕುಸಿಕ್ಕಾಗಿ,
ಸಹಾರಾದ ಮರುಭೂಮಿಯು
ಗೀರು ಗೀರು ಮುಖವಾಗಿ

ಚಾಕುಲೇಟು ಸಿಕ್ಕೊಂಡಂತೆ
ಶ್ವಾಸನಾಳದಲ್ಲಿ

ಆಳದಲ್ಲಿ
ಎಲ್ಲೋ ಭೂಮಿ ಗಡಗಡ ನಡುಗಿ
ಅದರ ನಡುಕ ಹರಿಹರಿದು
ಇಲ್ಲೂ ಬಂದಿರಬಹುದೆ–ಅಂತ

ಹೊರಗೆ ಧಾವಿಸಿ ಬಂದು
ಮುಗಿಲ ಕಡೆ ನೋಡಿದಾಗ

ಆ್ಯಂಟೆನಾ ಮೇಲೊಂದು ಗುಬ್ಬಿ
ಅವರ ಮಗ್ಗುಲಲ್ಲೊಂದು ಗುಬ್ಬಿ
ಕುಂತು
ಜೋಕಾಲಿಯಾಡುತ್ತಿದ್ದವು.

ರೈಲಿನ ಗಾಡಿಗಳಂತೆ

—ಚೆನ್ನಣ್ಣ ವಾಲೀಕಾರ

ರೈಲಿನ ಗಾಡಿಗಳಂತೆ, ಸರಕಾರದ ಬಸ್ಸುಗಳಂತೆ,
ಆಕಾಶದ ವಿಮಾನಗಳಂತೆ–ಎಲ್ಲರೂ ಬರುತ್ತಾರೆ; ಪ್ರೀತಿಸುತ್ತಾರೆ.
ಉತ್ತರ ಪಡೆದು ಫೋಟೋ ತೆಗೆಯುತ್ತಾರೆ : ಸಿನಿಮಾ ಮಾಡುತ್ತಾರೆ.
ಪುಸ್ತಕ ಬರೆದು ಹಣ, ಹೆಸರು ಮಾಡುತ್ತಾರೆ. ಆದರೆ ಇವರಾರೂ—
ನಮ್ಮ ಕೊರಳಿಗೆ ಬಿಗಿದ ಉರುಲನ್ನು ಬಿಚ್ಚಲು ಬಯಸುವುದಿಲ್ಲ !
ಬಿಚ್ಚಲು ಹೊರಟರೆ ಎಲ್ಲಿ ತಮ್ಮ ಕೊರಳಿಗೆ ನಿತ್ಯ ಉರುಲು
ಬಿದ್ದೀತೆಂಬ ಭಯ. ಅಂತೇ ಮೊಸಳೆ ಕಣ್ಣೀರು ಸುರಿಸಿ ಪಾರಾಗುತ್ತಾರೆ.
ತತ್ವಜ್ಞಾನಕ್ಕಾಗಿ ರಸೆಲ್ಲನಂತೆ ಜೇಲು ಸೇರಿದವರು,
ತನ್ನ ಜನಕ್ಕೆ ಏನೂ ಮಾಡದಿದ್ದರೆ ವಿದ್ಯುತ್‌ಕಂಬಿ ಹತ್ತಿ
ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದ ಅಂಬೇಡಕರರಂತೆ,
ಕಾರ್ಮಿಕರ ಬಿಡುಗಡೆಗಾಗಿ ತನ್ನ ಕಣ್ಣಿನ ಮೊಂಬತ್ತಿ ಉರಿಸಿದ
ಕಾರ್ಲ್ ಮಾರ್ಕ್ಸ್‌ನಂತೆ —
ಸುಳ್ಳು ಸುಟ್ಟು ಹೋಗುವವರು ಎಲ್ಲಿದ್ದಾರಯ್ಯ,
ಎಲ್ಲಿದ್ದಾರೆ ನಮ್ಮಲ್ಲಿ ಹೇಳಿ ?

ಕನಸಿನ ಗೊಮ್ಮಟ

—ಚೆನ್ನವೀರ ಕಣವಿ

ಬಾಹುಬಲ ತೋರಿಸುವ,
ಗೆದ್ದು ಮೆರೆಯುವ
ಅಹಂಕಾರವನೊದ್ದು ಮೇಲೆದ್ದು
ಮುಗಿಲುದ್ದ ನಿಂತಿರುವ,
ಕಾಲು ಸೋಲದೆ, ಕಾಲನನ್ನೇ ಸೋಲಿಸಿ
ಹೊಸ ದಿಗಂತಕ್ಕೆ ದಿಟ್ಟಿ ನಿಲಿಸಿ—
ಸಾವಿರದ ಸತ್ಯ–ಸೌಂದರ್ಯದ ಮಹಾಮಸ್ತಕಕ್ಕೆ
ಸಾವಿರದೆಂಟು ಕಲಶಗಳ ತುಂಬಿ ತುಂಬಿ
ಹಾಲು ಸುರಿದಾಗ—
ಒಂದು ಹನಿಯೂ ಚೆಲ್ಲದಂತೆ
ಬಯಲ ಬೊಗಸೆಯಲಿ ಹಿಡಿದು,
ದೂರ ದೂರದ ಕಪ್ಪು ಮಕ್ಕಳನೆಲ್ಲ ಕರೆದು
ಬೆಳ್ಳಗೆ ಕುಡಿಸಿದಂತೆ—
ಬಾನಿನಲ್ಲಿ ತೇಲುವ ಮೋಡ
ಹಠಾತ್ತನೆ ಮಿಂಚಿ
ಧೋ ಧೋ ಸುರಿದು
ನಿನಗಂಟಿಸಿದ ಜಿಡ್ಡು ತೊಳೆದಂತೆ
ಬೆಟ್ಟಕ್ಕೆ ಬೆಟ್ಟವೇ ಅಟ್ಟಹಾಸದಲಿ ನಕ್ಕಂತೆ
ನಾನೊಂದು ಕನಸು ಕಂಡೆ.

ಕವಿತೆ

—ಜಯರಾಮಕಾರಂತ

ಹೆಣ್ಣನ್ನು ಹೂವಿಗೆ ಹೋಲಿಸಿ
ಹಾಡಿದ ಕವಿ
ಮೆಚ್ಚಿದನೆ ಹೆಣ್ಣನ್ನು
ಪ್ರೀತಿಸಿದನೆ ಹೂವನ್ನು
ಎನ್ನುವುದು ಕಷ್ಟ.

ಯಾಕೆಂದರೆ ಕೋಮಲ ಅಂದ-
ವ ಗುಣವಾಸನೆ ವಿಶೇಷವ
ಸುಕುಮಾರ ಪ್ರತಿಮೆಯಲ್ಲಿ ನಿಲ್ಲಿಸಿ
ಸುಮ್ಮನೆ ನಡೆಯುವುದೆಂದರೆ
ಕವಿಗೆ ಇಷ್ಟ.

ಆದರೆ ಮುಳುಗಬಹುದು
ಪ್ರತಿಮೆಗಳ ಅರ್ಚನೆಯ ನಡುವೆ
ಸಾಮ್ರಾಜ್ಯಗಳು
ಮೂಡಬಹುದು ಪದಾರ್ಥಗಳ ಧೂಮ
–ಕೇತುಗಳು ಆಕಾಶದ ಭೂಮಿಯ
ದಾಖಲೆಗಳ ಎಗ್ಗಿಲ್ಲದೆ ಮುರಿದು.

ಕವಿಗಳ ತಪ್ಪೋ ಅದು.
ಕವಿತೆಗಳ ಒಡಲಲ್ಲಿ ಹೃದಯಗಳ

ಅಥವಾ ಬೆಳ್ಳಿಗಿನ ಆಸೆಗಳ
ಮೊಳೆಯಿಸಿ ಬೆಳೆ–ಬೆಳೆಯುವುದು ?

ಅಥವಾ ತಪ್ಪಲ್ಲ ಎಂದರೂ
ತಡೆಯಬಲ್ಲರು ಯಾರು
ನಕ್ಷತ್ರಖಚಿತ ಪದಗಳ
ವಾಚನ ನಡುನಡುವೆ
ಜರಗಬಲ್ಲ ಜಗಳಗಳ
ಅಥವಾ ಉಲ್ಕಾಪಾತಗಳ ?

ಕೊಡೈಕೆನಾಲ್ ಪದ್ಯಗಳು

—ಜಯಂತ ಕಾಯ್ಕಿಣಿ

ನೀಲಿಗೊಂದು ಕೋಡು
ನೆಲದಿಂದೆ ಮೂಡಿ ಬಂದದ್ದು.
ಸೂರ್ಯನ ಹೊಸ ಕುದುರೆಗಳ ಹೂಡಿ ಕಾಡಿನಲ್ಲಿ
ಇಳಿಯಿತು ನಸುಕು ಕುರಿಂಜಿ ಹೂವುಗಳ
ಕನಸಿನಂಚಿನ ಮೇಲೆ.
ಮಂಜಿನ ಮಡಿಲಲ್ಲಿ ಮಲಗಿರುವ ಊರು ಬಿಸಿಲಿಗೆ
ಬೆಚ್ಚನೊಲೆಯು ಬೆಕ್ಕಿನ ಮರಿ ಲಲ್ಲೆಗೆ ಎದೆ ತೆರೆದ
ತೊದಲು
ಸರೋವರ ಕಣ್ಣಲ್ಲಿ ಮಾಗಿದ ಕನಸು
ಕವಿತೆ ಹೊಳೆಯದ ಮಣ್ಣು ನೆನಪಿಗೆ ಹೆಸರಿಡುವ
ಝರಿ ತಂಪು ತಳಿರು
ಅರಳಿ ನಿಂತ ಅನಂತದ ಬಾಗಿಲಿಗೆ
ಸಮಯ ಕಟ್ಟಿದೆ ತೋರಣ
ಮೈ ಮರೆಯುವ ಭಾಗ್ಯಕ್ಕೆ ಯಾಕೆ ಬೇಕು ಕಾರಣ

* * *

ಈ ಮಲೆಗಳಲ್ಲಿ
ಪ್ರತಿ ಬಾಲೆ ಮದುಮಗಳು ಪ್ರತಿ ಪೋರ
ಮದುಮಗ
ಪ್ರತಿ ಜೋಡಿಗೂ ಮೈ ಮೇಲಿನ ಹುರುಪಿನ ಹೂ

ಮಂಟಪ
ಮಗ್ಗುಲಲ್ಲಿ ಮುಂಜಾವು ರೆಪ್ಪೆಯಲ್ಲಿ ಚಂದ್ರ
ಪ್ರತೀ ತುಟಿಯು ಪಿಸುಉಸಿರೂ ಅಕೋ ಆಯ್ತು
ಮೋಡ
ಕತ್ತಲಿನಲ್ಲಿ ಮೆಟ್ಟಿಲುಗಳನೇರಿ ಬಂದರು
ಕೊಡೈನ ಚಿಣ್ಣರು ಉಣ್ಣೆಯು
ಹರಕು ನಿಲುವಂಗಿಯಲ್ಲಿ
ಕಾಡಿಬೇಡಿ ಫೋಟೋಕ್ಕೆ ನಿಂತರು ನನ್ನವಳ ಜತೆ.
ಮತ್ತೆಂದೂ ಸಿಕ್ಕದ ಅರಿವಿದ್ದೂ ಇವರಿಗೆ ಈಕ್ಷಣ
ಇದೆಂಥ ದಾಖಲೆಗೊಳ್ಳುವ ತವಕ
ಕುರಿಂಜಿ ಹೂವುಗಳೇ ಈ ಚಿಣ್ಣರನ್ನು
ಕಾಪಾಡಿ. ಅಲ್ಲಿಯು ರಸ್ತೆಗಳೇ ಬಂದಿವೆ
ಇಲ್ಲಿಯು ತನಕ

* * *

ಕಾಟೇಜಿನ ಧೋಬಿ
ನಮ್ಮನ್ನು ತರಾಟೆಗೆ ತೆಗೆದುಕೊಂಡ
ಬೇಕಾದಾಗ ಬಂದು ಒಣಗಿಸಿಕೊಡಲಿಕ್ಕೆ
ಸೂರ್ಯನೇನು ನಿಮ್ಮಪ್ಪನ ಗಂಟೆ ? ನಿಮಗೆಂದೇ
ರಾತ್ರಿಗೂ ಸೂರ್ಯನನ್ನು ಹಿಡಿದು ತರಲೆ ?
ಒಳಗೆ ಅವಿತಿದ್ದ ಚಂದ್ರ ಹೆದರಿ
ಮೆಲ್ಲಗೆ ಹಿಂಬಾಗಿಲಿಂದ ಓಡಿ ಹೋದ.
ನಾವು ಪೆದ್ದಾಗಿ ಗುಡ್‌ನೈಟ್
ಎಂದು ಬಾಗಿಲು ಹಾಕಿದೆವು

* * *

ಹನ್ನೊಂದು ವರುಷಕ್ಕೊಮ್ಮೆ ಕೊಡೈನ ಮಲೆಗಳಿಗೆ
ಶಾಲು ಹೊದಿಸಲಿರುವ ಕುರಿಂಜಿ ಹೂವುಗಳೇ

ನಡೆದಿರುವೆವು ನಾವು ನಿಮ್ಮ ನೆಲದ ಮೇಲೆ
ಇಂದು ನಮ್ಮನ್ನು ಹಾದ ಮೋಡಗಳು
ಹೀರಿವೆ ನಮ್ಮ ಬೆವರು
ಹನಿದು ಮಣಿದು ಈ ಮೋಡಗಳು
ನಾಳೆ ನಿಮ್ಮ ಅರಳಿದ ತುಟಿಗಳ ಮೇಲೆ
ತೊಟ್ಟಿಕ್ಕುವಾಗ
ನಮ್ಮನ್ನು ಅಲ್ಲಗಳೆಯದಂತೆ ಉಳಿಸಿ.

*   *   *

ಪಳನಿಯ ಘಟ್ಟಗಳನ್ನು ಇಳಿಯುವಾಗ
ಮೋಡಗಳು ನಮ್ಮನ್ನು ಅಡ್ಡಗಟ್ಟಿದವು. ನಿಂತು
ಪುಟ್ಟ ರ್ಹೋಪಡಿಯಲ್ಲಿ ನಾವು ನೆಸ್ ಕಾಫಿ
ಕುಡಿಯುವುದನ್ನು
ದಟ್ಟ ಮರಗಳ ನಡುವಿನ ಕಾಫಿಯ ಹಣ್ಣುಗಳು
ಇಬ್ಬನಿ ಕಣ್ಣಿಂದ ನೋಡಿದವು. ಘಟ್ಟ ಅಲುಗಲಿಲ್ಲ
ಮತ್ತೆ ಬಸ್ಸು ಇಳಿಯಿತು ಕಣಿವೆಗೆ ಘನತೆಯಿಂದ
ಹಾಯುವ ಗಗನಕ್ಕೆ ನಮ್ಮ ಗುಟ್ಟುಗಳ ತಿಳಿಸುತ್ತ
ಬ್ಯಾಂಕು ರಸೀದಿಗಳೆಡೆ ಅಂಕಿತ ನಾಮಗಳೆಡೆ
ನಮ್ಮನ್ನು ಎಳೆಯುತ್ತ
ಪ್ರತಿ ಫಲ ಹೇಳದ ಪ್ರೀತಿಯನ್ನು ಉಡಿಯಲ್ಲಿ
ತುಂಬುತ್ತ
ಮತ್ತೆಂದೂ ಮರಳದ ಈ ಕ್ಷಣದ ವಿದಾಯದ
ನೋವಿಗೆ ಗಾಢವಾಗಿ ತಬ್ಬಿದೆವು
ಪಳನಿಯ ಘಟ್ಟಗಳನ್ನು ಇಳಿಯುವಾಗ

ಮಸ್ಸೂರಿ

—ಕೆ. ವಿ. ತಿರುಮಲೇಶ

ಗುರಿ ಮಸ್ಸೂರಿ ಮಹಾತ್ವಾಕಾಂಕ್ಷೆ ಗರಿ ಕೆದರಿ
ಎತ್ತರಕೆ ನಿಂತಿತ್ತು ನೋಡಿದರೆ ಕತ್ತು ನೋಯುತ್ತಿತ್ತು
ಕೆಳಗೆ ಸುಣ್ಣದಕಲ್ಲು ಮೇಲೆ ಹುಲ್ಲಿನ ಮಖಮಲ್ಲು
ಎರಡು ಜಗತ್ತುಗಳ ನಡುವೆ ಇಷ್ಟು ವ್ಯತ್ಯಾಸವೆ ?

ರಸ್ತೆಯೋ ಬಹಳ ಕಡಿದು ಜೀವ ಕೈಯಲ್ಲಿ ಹಿಡಿದು
ಕುಳಿತಿದ್ದೆವು ಕಾರಿನಲ್ಲಿ ಅಪಘಾತಗಳ ನೋಟ ಅಲ್ಲಲ್ಲಿ
ನಮ್ಮ ಚಾಲಕನೂ ತೋರಿಸುತ್ತಿದ್ದ ತನ್ನ ಕೈಚಳಕ
''ಇಂಥ ಹಾದಿಗಳೇ ಹೀಗೆ!'' ಎಂದುಕೊಂಡೆವು ನಮ್ಮೊಳಗೆ

ಸುತ್ತಿ ಬಳಸಿ ಹತ್ತಿ ಕುಳಿತಲ್ಲೆ ತಲೆಸುತ್ತಿ
ಮುಗಿಯುವುದೆಂದು ಈ ಆರೋಹಣವೆಂದು
ನೋಡಿದರೆ ಎಲಾ ! ಎದುರು ಮಸ್ಸೂರಿಯ ಬಜಾರು !
ಇನ್ನು ನಮ್ಮನ್ನು ಹಿಡಿದು ನಿಲ್ಲಿಸುವವರಾರು ?

ಬಿಟ್ಟು ನಮ್ಮೂರ ಬಂದಿದ್ದೆವು ಬಹಳ ದೂರ
ಈಗೇಕೆ ಆ ಗೊಡವೆ ಇಂಥ ಬೀದಿಗಳ ನಡುವೆ
ಬೇಕಾದವರು ಹೊರಡಿ ಹೇಸರಗತ್ತೆಗಳ ಗಾಡಿ
ಪಾದಚಾರಿಗಳಾಗಿಯೆ ನಾವು ಇಲ್ಲಿ ಸಂಚರಿಸುವೆವು

ಕೊಡು ಎವೆಗೆ ಎವೆಯು ನೆಲೆ ಬೆಟ್ಟದ ಚೆಲುವೆ
ಇಲ್ಲಿಯು ತನಕವು ಬಂದೆ ನಿನ್ನ ನೋಡಲೆಂದೆ
ಏನ ಮಾರುವೆ ನನಗೆ ಬೇಕಾದ್ದು ನಿನ್ನ ನಗೆ
ಮಾರುವೆಯು ನನಗೊಂದು ಮಂಜಿನರಮನೆಯು ?

ಕಟಾಂಜಣದ ಬಳಿ ಸಿಗರೇಟಿನ ಹೊಗೆಯುಂಗುಳಿ
ನೋಡಿದೆನು ಡೆಹರಾಡೂನು ಆಚೆಗಿನ್ನೊಂದು ಸಾನು
ನಿಂತಿದ್ದೆನಲ್ಲಿ ಮರೆತು ಹೀಗೆಷ್ಟು ಹೊತ್ತು
ಎಂದ ದಾರಿಯು ಪಯಣ ಉಳಿದಿತ್ತು ಅವರೋಹಣ

ಆವರಿಸಿದಾಗ ಕತ್ತಲು ತಲುಪಿದ್ದೆವು ಕೆಳಗಿನ ತಪ್ಪಲು
ಎಲ್ಲಿ ಮುಂಜಾನೆ ಎಲ್ಲಿ ನನ್ನ ಮಂಜಿನರಮನೆ ?
ಎದ್ದೆ ಹಾಸಿಗೆಯಿಂದ ಧಾವಿಸಿದೆ ಅಂಗಳದ ಬದಿಗೆ
ತೇಲಿ ಹೋಗುತ್ತಿತ್ತು ಅದು ಮಸ್ಸೂರಿಯ ಕಡೆಗೆ

ಸಾಮಾನ್ಯ

—ದೊಡ್ಡರಂಗೇಗೌಡ

ನನ್ನ ಬದುಕೆಲ್ಲಾ ಸ್ವಪ್ನ ಸುಮವೇನಲ್ಲ
ಇನ್ನು ಹೆಜ್ಜೆಗುರುತೂ ಸಹ ಬಣ್ಣ ಹೊತ್ತಿಲ್ಲ—
ತೊಡುವ ಅಂಗಿಯಾಗಲೀ
ಕಟ್ಟುವ ಲುಂಗಿಯಾಗಲೀ
ಅಪೂರ್ವ ಇಂದ್ರ ಚಾಪ ವರ್ಣಗಳಿಂದ ರಂಜಿಸುವುದಿಲ್ಲ !

ನನ್ನ ನುಡಿಯಲ್ಲಿ ಇಲ್ಲದ ವೈಭವವಿಲ್ಲ
ನಡೆಯೆಲ್ಲ ನರ್ತನ ಶೈಲಿಯೇನಲ್ಲ......
ನಾ ಸಾಮಾನ್ಯ
ಸಾಮಾನ್ಯರಲ್ಲಿ ಸಾಮಾನ್ಯ ;
ನಾ ಅತೀತನಲ್ಲ
ಎಲ್ಲರಿಗಿಂತ ಅನ್ಯನೇನಲ್ಲ—

ಶಶಿರಂಜಿತ ಛಾಯೆಯಿಲ್ಲ ಮುಖದಲ್ಲಿ
ಕಿರಣ ಕುಂಚದ ಅಮರ ರೂಪವಿಲ್ಲ ನಿಲವಿನಲ್ಲಿ
ಮಿಂಚಿನ ಹೊಳಪೇನಿಲ್ಲ ಕಣ್ಣಿನಲ್ಲಿ
ಯಾವ ಬಗೆ ಸಮ್ಮೋಹನವೂ ಇಲ್ಲ ನೋಟದಲ್ಲಿ !

ನಾ ಸಾಮಾನ್ಯ
ಸಾಮಾನ್ಯರಲ್ಲಿ ಅತಿ ಸಾಮಾನ್ಯ

ನನ್ನ ಬಾಳಿಗುಂಟು ಮಣ್ಣ ಸಖ್ಯ ;
ಕೋಟಿ ಕೋಟಿ ಜಗದ ಜನರಂತೆ
ನಾ ಕೂಡ ಮನುಷ್ಯ
ಸಾಮಾನ್ಯ

ನಾ ಕವಿ ಅಲ್ಲ

—ಧರಣೇಂದ್ರ ಕುರಕುರಿ

ಕಲ್ಪನಾ–ಲೋಕದೊಳಗs ಕುಂತು
ಬದಕೀಗೆ ಬಣ್ಣಾ ಬಳದು
ಕವಿತಾ ಬರಿಯೋದು
ನನ್ನಿಂದ ಸಾಧ್ಯ ಇಲ್ಲ
ಯಾಕಂದ್ರ ನಾ ಕವಿ ಅಲ್ಲ.

ಹೂದೋಟದೊಳಗ ಬಿಂಕದಿಂದ ಬೆಳೆದು
ಸುತ್ತ–ಮುತ್ತ ಸುಗಂಧ ಸೂಸುವ
ಅರಳಿದ ಗುಲಾಬೀ ಹೂ
ಕಂಡಾಗ
ನನಗ ಖುಷಿ ಆಗೋದಿಲ್ಲ,
ಮನಸ್ಸು ಅರಳೋದಿಲ್ಲ.
ಬೆವರ ಸುರಿಸಿ, ನೆತ್ತುರಾ ಹರಿಸಿ
ಅದನ್ನ ಬೆಳಸಿದವನ
ಬಾಡಿದ ಮುಖ
ನನ್ನ ಮುಂದ ಮೂಡಿದರ
ಅದನ್ನ ಅಳಕಿಸೋದು
ನನ್ನಿಂದ ಸಾಧ್ಯ ಇಲ್ಲ.
ಯಾಕಂದ್ರ ನಾ ಕವಿ ಅಲ್ಲ.

ಅನ್ಯಾಯದ ಕೆಳಗ ಸಿಕ್ಕವರು
ಅಳೋದನ್ನ ಕೇಳಿದ ನಾನು
ಸ್ಟೀರಿಯೋ ಸಂಗೀತಕ್ಕ
ತಾಳ ಹಾಕೋದಿಲ್ಲ.
ನಮ್ಮೂರ ಹನಮವ್ವ
ತನ್ನ ಹನ್ನೆರಡ ಮಕ್ಕಳಾ ಕಟಗೊಂಡು
ಕಲ್ಲ ಒಡಿಯೋದು ನೋಡಿದ
ನನಗ
ಬೆಂಗಳೂರಿನ ಬಂಗಲೆ ಕಂಡಾಗ
ಸಂಕಟಾದಂಗ
ಸಂತೋಷ ಆಗೋದಿಲ್ಲ,
ಯಾಕಂದ್ರ ನಾ ಕವಿ ಅಲ್ಲ.

ಬೃಂದಾವನದ ಚಂದಾ–ಚಂದದ
ದೀಪಗಳ ನಡುವ
ಒಂದ ಸಮನs ಪುಟಿಯುವ
ಆ ಸಂಗೀತದ ಕಾರಂಜಿ
ಕಂಡಾಗ
ಕನಸು ಕಮರಿದ
ಬರಗಾಲದ ಭೂಮಿಯಂಥ
ನನ್ನ ಮನದೊಳಗ
ಭಾವನೆ ಉಕ್ಕುವುದಿಲ್ಲ
ಯಾಕಂದ್ರ ನಾ ಕವಿ ಅಲ್ಲ.

ಎಪ್ಪತ್ತೆರಡು ಕೋಟಿ
ಮಂದಿಯೊಳಗ
ಇಪತ್ತೆರಡs ಜನ
ದುಡ್ಡಿದ್ದವರಿದ್ದರ
ನಗಬೇಕೋ ಅಳಬೇಕೋ ತಿಳಿಯೋದಿಲ್ಲ,
ಯಾಕಂದ್ರ ನಾ ಕವಿ ಅಲ್ಲ.

ಸೀತಾಫಲ

—ಬಿದರಹಳ್ಳಿ ನರಸಿಂಹಮೂರ್ತಿ

ಆಂಧ್ರದ ನಮ್ಮ ಕಾಡುಗಳಲ್ಲಿ
ಎಲೆ ಮುಡಿದ ತೆಳು ಗಿಡದಿಂದ ದುಂಡಗೆ
ಮೊಗ್ಗಾಗಿ ಬೊಕ್ಕೆ ಬೊಕ್ಕೆ ಹಚ್ಚಗೆ
ಮೊನಚಾಗಿ ಜೋತ ಫಲ
ಬೊಗಸೆಯೊಡ್ಡುವ ನೆಲ

ಬಿಡಿಸಿದರೆ ಒಳಗೆಲ್ಲ ಬೆಳ್ಳಗೆ
ನಗುವ ಮಿದು ಮಿದು ಎಸಳು ಹಲ್ಲು
ಸಿಹಿಗೆ ನಾಲಿಗೆಯೆ ಕರಗುವ ಮಾಯೆ
ಇಲ್ಲವೆ ಒಗರೊಗರು ಹುಳಿ
ಕರ್ರಗೆ ಚಿಮ್ಮಿ ಹೊಳೆಯುವ ಬೀಜ

ಗಮ್ಮಗೆ ಮಾಗಿ ದಿವಿನಾಗಿ
ಬಳಿವ ಬುಟ್ಟಿಗಳಲ್ಲಿ ಪೇರಿಸಿಟ್ಟ ಹಳ್ಳಿ ಪರಿಸೆ
ಪಂಡೊ ಪಂಡೊ ಒಕ ರುಪಾಯಿಕಿ ಒಕ ಬುಟ್ಟಿ
ಕೂಗಿ ಚೂಪಾಗಿ ಕಾಡಿಗೆ ಕಣ್ಣ ಸಾಲಾಗಿ
ಕಾಯುತ್ತಲಿ ಕೂತಿರುವ ತೆಲುಗು ಸೀತೆಯರು

ತಲ ತಲಾಂತರ ಹುಯ್ದು
ಚುಕ್ಕಿ ಚುಕ್ಕಿ ಕಸೂತಿ ಹಚ್ಚೆಯು ನೆರಳು

ಒತ್ತಿ ಹಿಡಿದಿದೆ ಇವರ ಕಪ್ಪುಮುಖಿ ಕೊರಳು
ಮುಳ್ಳು ಮುಳ್ಳಿದ್ದ ಒರಟುಗಲ್ಲು ಪಾಚಿ ಬಣ್ಣದ ಹಣ್ಣು
ಒಡಲೊ ಹಾಲು ಸಕ್ಕರೆ ತಿರುಳು

ಯಾವ ಮಾಯದಲ್ಲೊ ಹಣ್ಣಿಗಂಟಿದ ಹೆಸರು
ಹೆಸರ ಹಿಂದಿನ ಆತ್ಮೀಯ ಪಲುಕು
ಕಾಲ ಒಂದರಿಯಾಡಿದ ಬೆಲೆ ಹರಳುಗಳು
ಪಕ್ವಗೊಳ್ಳುವ ಜನಪದದ ನೋವುಗಳು
ಮಲೆತು ಕಲೆತು ಮುನ್ನಡೆವ ಹಾಡು

ನಿನ್ನೆ ಮಧ್ಯಾಹ್ನ ಬಿಕರಿಯ ಹೊತ್ತಿನಲ್ಲಿ
ನೈಜಾಮ ನಗರಿಯ ಬಡೀ ಮಂಡಿಯಲ್ಲಿ
ಬಡ ಕಾಡಿನ ಸೀತಾಫಲವೊಂದು
ಮೆತ್ತಗೆ ಬಾಯ್ ಬಿಟ್ಟು ಬಿಸಿಲಿಗೆ
ಗಿರಾಕಿ ತತ್ತರಿಸುವ ಮಾತು ಆಡುವುದ ಕಂಡೆ.

ಮಲ್ಲಿಗೆಯ ಮಾಲೆ

—ಕೆ. ಎಸ್. ನರಸಿಂಹಸ್ವಾಮಿ

ಕವಿಯೆಂದು ನನ್ನನ್ನು ಯಾರು ಕರೆದರು, ಗೆಳೆಯ ?
ತುಂಬ ಸಂತಸ. ನಿನಗೆ ವಂದನೆಗಳು.
ಮತ್ತೆ ಹೇಳಿದರಲ್ಲ ಅವರು ! ಎನ್ನುವೆಯಲ್ಲ ?
ನಿಜವೆ ಇರಬಹುದವರು ಅಂದ ಮಾತು.

ಕತ್ತು ಹಿಸುಕಿಲ್ಲ ಒಂದಾದರೂ ಆಸೆಯನು
ನಾನು ಈ ವರೆಗೆ. ಇದ ನೀನು ನಂಬು.
ಆಸೆಗಳ ಹಾಡ ಹೊರಟಿದ್ದೇನೆ ರಾಗದೊಳು :
ತೆರೆದೀತು ಹೂಗಳನು ನಟ್ಟ ಹಂಬು.

ನಾನು ಒಲವಿನ ಭಕ್ತ, ಮಲ್ಲಿಗೆ ಮಾಂಪಳಿರು
ಮುಗಿದಿಲ್ಲ ನಾ ಹಿಡಿದ ನಲಿವ ಚಿತ್ರ.
ಹತ್ತು ಸಲ ನಾನು ಕೇಳಿರುವ ನನ್ನದೆ ಹಾಡು
ನನಗೆ ನಿನಗೆಲ್ಲರಿಗೆ ಪ್ರೀತಿ ಪಾತ್ರ.
'ಇವನ–ಅನುಭವ ತೆಳುವು' ಎಂದ ಟೀಕೆಗೆ ನಕ್ಕೆ
ಎಂಟು ಮಕ್ಕಳು ನನಗೆ. ಉತ್ತರಿಸಿದೆ :
'ಅಂದವರ ಬಾಯಿಗಿದೊ ನಾನು ಬೇವಿನ ಚಕ್ಕೆ !'
ನನ್ನ ದನಿಯನು ಕೂಡ ಎತ್ತರಿಸಿದೆ.

ನಾನು ಹುಟ್ಟಿದ್ದು ಉರಿಬಿಸಿಲಲ್ಲಿ ; ಬೆಳೆದದ್ದು
ಚಂಡ ಪ್ರಚಂಡ ಕೆಂಡಗಳ ಮೇಲೆ

ನಡು ದಾರಿಯಲ್ಲಿ ನನಗಿವಳೆಂದು ಸಿಕ್ಕಿದಳು ;
ನಾನು ನಿನ್ನಂತೆಯೇ ಒಲವ ಕಂಡೆ.

ಇವಳಿತ್ತು ನಿಲ್ಲಿಸಿದ ಬಿದಿರಿನೇಣಿಯ ಮೇಲೆ
ನಾನು ನಕ್ಷತ್ರಗಳ ಹಿಡಿಯಹೋದೆ—
ಈಗಲೂ ಕೇಳುವಳು 'ಇನ್ನು ಆಸೆಯೇ ನಿಮಗೆ
ಎಪ್ಪತ್ತರಲ್ಲು ?' ಮುತ್ತಿಟ್ಟು ನಲಿದೆ.

ಗಾರೆಗೋಡೆಯ ಚಿತ್ರಸಾಲು ಪರಿಷತ್ತಿನಲಿ :
ಒಬ್ಬೊಬ್ಬರೂ ಒಂದು ಧನ್ಯಜೀವ.
ನನಗು ಎಡೆಯಿರಬಹುದು ಅವರಿರುವ ಸಾಲಿನಲಿ !
– ಮನವ ತುಂಬಿದ್ದುಂಟು ನಮ್ರಭಾವ

ಸೇತುವೆಯ ದಾಟುತ್ತ ಹೆದ್ದಾರಿಯಲಿ ನಡೆದು
ಎಲ್ಲ ನೋವನು ಮರೆತೆ ಬದುಕಿನೊಳಗೆ
ನೊಂದ ನೋವನಷ್ಟೇ ಹಾಡಲೇ ಬೇಕೇನು ?
ಬೇಡವೇ ಯಾರಿಗೂ ಸಿರಿ ಮಲ್ಲಿಗೆ ?

ಬೆಚ್ಚನೆ ಚಳಿ

—ಪು. ತಿ. ನರಸಿಂಹಾಚಾರ್

ಯಾರು ಹೇಳಿದರೊ ಏನೋ ಕಾಣೆ
ಮಾಗಿಯು ನಸುಕಿನ ಚಳಿಗಾಳಿ
ಕಿಟಕಿಯ ತೆರೆಯನು ಹಾರಿಸಿ ಮೂಡಣ
ತೆಳ್ಳನೆ ನೀಲಿಯ ತಣ್ಣನೆ ರೇಕಿನ
ಚುಮು ಚುರುಕನು ತಟ್ಟಿಸುತಿದೆ ತಲೆಗೆ.

ಬೂರ್ನೀಸನು ಹೊದೆದೊಳಗಡೆ ಬೆಚ್ಚಗೆ
ಮುದುಡುತ ಮಲಗಿಹ ತನಿಸೊಗ ಮೈಗೆ.

ಬಾಗಿಲ ತೆರೆದಿಹ ಪಂಜರಗಿಳಿ ಮನ
ಚಡಪಡಿಸುತ್ತಿದೆ ಬಯಲಲೆತಕ್ಕೆ—
ಮುಂಜಾನೆಯ ತೆಳು ಬೆಳು ಬಾನ್ನೀಲಿಯ
ಕಣ್ ಬೊಗಸೆಯ ಸೊದೆ ಸವಿತಕ್ಕೆ.

ಮೊಳಕಾಲ್ ಮಂಡಿಯು ಗದ್ದದೊತ್ತಿನೊಳು
ಹೊಸಿಲನು ದಾಟೆನು ಎನುತಿದೆ ಮುಂಡ
ಹೆಮ್ಮರ ತೋಪಿಂಚರ ಕಣ್‌ಕಿವಿಗಳ ಸೆಳೆಯಲು
ಮಲೆಯನು ದಾಂಟುವೆನೆನುತಿದೆ ರುಂಡ.

ತಲೆಯೋ ಹುಚ್ಚಗೆ
ಮೈಯೋ ಬೆಚ್ಚಗೆ

ಇವ ಸಂಬಾಳಿಸುತಿರುವೀ ಜೀವಕ್ಕೆ
ಇರ್ನೆಲೆಯೂ ಸವಿ ಬಲುವೆಚ್ಚುಗೆ.

ಎನಿತಿನಿದೀ ಇಂದೀವರದೆಸಳಿನ ಬಾನ್ನೀಲಿ
ಮೈ ಬಿಸಿಯಿಳಿಸದೆ ತಲೆ ತಣ್ಣಗಿಸುವ
ಈ ಎಳಹಗಲಿನ ಚಳಿಗಾಳಿ !
ಇಚ್ಚೆ ಮೊನೆಗೂಡಿ ಎಬ್ಬಿಸದಲಸಿಕೆ
ಬೆಳ್ಳಂ ಬೆಳಕಿನ ಚುಮು ಚಳಿ ಚುರುಕಿನ
ಗಾಳಿಯುಂಸಿರಾಡಿ ಹೊರಗಲೆವೆಳಸಿಕೆ.

ಮಲಗಿರು ಬೆಚ್ಚಗೆ ಎಂಬುದು ಮುಂಡ
ಏಳು ಎದ್ದೇಳು ಎಂಬುದು ರುಂಡ
ಇವುಗಳೆರಡಕೂ ಊಮೂಮೆನ್ನುತ
ಸರಿವೀ ಹೊಂಗಳಿಗೆಯು ಸೆರಗೆಳೆಯುತ
ಅಲುಗದೆ ಹಾಸಿಗೆಯೊಳು ನಾನಿರಲೆಂಥ ಮುದ
–ಮುದಿಯರಿಗಲ್ಲದೆ ಮತ್ತಾರಿಗೆ ಈ ಸೊಗದ ಹದ ?

ಅಜ್ಞಾತರು

—ಕೆ. ಎಸ್. ನಿಸಾರ್ ಅಹಮದ್

(೧)

ರಾಷ್ಟ್ರದಜ್ಞಾತ ಕಲಿಗಳೆ–
ದಿನಪತ್ರಿಕಾಲಯದ ಅಚ್ಚುಮೊಳೆ ಗುರುತಿಸದ
ಅಸಂಖ್ಯಾತ ಅಖ್ಯಾತ ಜಲಿಯನ್‌ವಾಲಾಗಳೆ,
ಪ್ರಕಟಗೊಂಡು ಫಳಫಳಿಸುವ ಅಲಂಗಾಗದ
ನೆಲದಡಿಯ ಕತ್ತಲೆಯ ಗಡಸು ಲೋಹಗಳೆ,
ನೀವು ಹುಟ್ಟಿದ್ದೆಲ್ಲಿ, ಪಣವ ತೊಟ್ಟಿದ್ದೆಲ್ಲಿ, ಜೀವ ಬಿಟ್ಟಿದ್ದೆಲ್ಲಿ
ಎನುವ ಸುಳಿವೂ ಕೊಡದೆ
ಕಾಲಕೃಷಿಕನ ಕಣಜ ತುಂಬಿದವರೆ,
ಮರೆವೆವೆ ನಿಮ್ಮನ್ನ ?
ಮೈವೆತ್ತ ಸಿಡಿಲು ಬಡಬಾಗ್ನಿ ಮಿಡಿಲನ್ನ
ನಳನಳಿಸಿದೀ ನಾಡ ಬಾಳ ಕಣಕಣವ,
ದೀಪಿಸಿದ ಹಿರಿ ಋಣವ ಮರೆತೇವೆ ನಾವು ?
ಮರೆತೀತೆ ಬೇರ ಹೂವು ?
ಹೆಣ್ಣು ಗಂಡೆನದ ಬೇನಾಮಿ ಬಲಿದಾನಿಗಳೆ,
ನಮ್ಮಿರವಿನಾಳದಲಿ ಇದ್ದು ಇಲ್ಲದ ಹಾಗೆ ನೀವು
ನೆಲಸಿದ್ದೀರಿ—
ಎಂದೊ ನಿಂತ ಸಾರ್ವಜನಿಕ ಗಡಿಯಾರದಂತೆ
ಪಾಚಿಯಾವರಿಸಿದ ರಾಷ್ಟ್ರೀಯ ಇಮಾರತಿನಂತೆ.

(೨)

ಕೆಲವರಿಲ್ಲಿ ಗಹನ ಅಸ್ತಿತ್ವದ ಮೇಲು ತೊಗಟೆಗಳಾಗಿ
ಬಾಳ್ಗಡಲ ನೊರೆಯಾಗಿ
ನಾಯಿಗಂಟಿದ ತೊಣಚಿಯಂತೆ ದಿನಚರಿ ಬದುಕನಪ್ಪಿ
ಅರಿವಳಿದಿರಲು
ಮೇಧಾವಿ ನವಿಲುಗಳು, ಜಾಣ ಕಾಜಾಣಗಳು,
ಮಾರ್ಜಾಲರಾಜರಿತ್ಯಾದಿ ಶನಿಸಂತಾನ
ನೊಗವ ಹೇರಿದ ವಿಲಾಯಿತಿ ರಣ ಹದ್ದಿನೆದುರು
ಪಠಿಸಿರಲು ಗುಣಗಾನ
ಸಮತಲದ ಬಾಳಿಂದ ಕಿಡಿಬಿದ್ದ ಸಿಡಿಮದ್ದಿನಂತೆ
ಮೇಲಕೆ ಪುಟಿದು
ದಬ್ಬಾಳಿಕೆಯ ಗೂಳಿಯ ಕೊಂಬುಗಳ ಹಿಡಿದು
ಸೆಣೆಸಿದಿರಿ ನೀವು ಭವ್ಯೋದಾರ ಸ್ವಾರ್ಥದೂರರು,
ನಾವಾಗಲೆಂದು ಭವಿಷ್ಯದ ವಾರಸುದಾರರು.

(೩)

ನಿಮ್ಮ ನೆತ್ತರು ನೆಲವ ಕುಂಕುಮಿಸಿದೆಡೆಯಲ್ಲಿ
ಕೋವಿ, ಗಲ್ಲಿಗೆ ಬೀಗಿ ಉತ್ತರಿಸಿದೆಡೆಯಲ್ಲಿ
ಹೆಡೆ ನಿಮಿರಿ ರಂಜಿಸಿವೆ ಪಂಚತಾರಾ ಹೋಟಲು
ರೇಸುಕಣ, ಕ್ಲಬ್ಬುಗಳ ನಗೆಪಾಟಲು ;
ಬಹುಮಹಡಿ ಕಟ್ಟಡದ ಕಪಿಲೆ ಕೆಚ್ಚಲುಗಳು—
ಅಲ್ಲಿ, ಬಡವರ ಮನೆಗು ಹೆಚ್ಚು ವೈಭವಪೂರ್ಣ
ಸಿರಿವಂತ ಜನರ ಶೌಚಾಲಯ ಬಚ್ಚಲುಗಳು.

(೪)

ನಮ್ಮ ಸೌಧದ ಗೃಹಪ್ರವೇಶವಾಗಿ ಮೂವತ್ತೆಂಟು
ಸಂದಿದೆ :
ಅಕಾಲ ಮಳೆ ಮಾರುತಗಳೆದುರು ಆಗಾಗ ದೀಪ
ಕೆಟ್ಟಿರಬಹುದು.
ಫೋನು ಫ್ಯಾನು ಕೈಕೊಟ್ಟಿರಬಹುದು.
ಅಲ್ಲಲ್ಲಿ ಗಾರೆ ತರಚಿ, ಗೋಡೆ ಬಣ್ಣಗೆಟ್ಟು
ತೇವವಂಟಿರಬಹುದು ;
ಅಡಿಗೆ ಅನಿಲದಾಯಾತ ತಡವಾಗಿ ಬಹುಕು
ಕುಂಟಿರಬಹುದು.
ಕಾಂಪೌಂಡಿನೊಳಗೆ ಕಳ್ಳರಿಳಿವಾಗ,
ಕಾವಲುನಾಯಿ ಗೈರುಹಾಜರಿಯಾಗಿ ಗಸ್ತು ಕೊಟ್ಟಿದೆ.
ಮಾನವೀ ಮೌಲ್ಯಗಳ ಶತಯಾತ್ರೆ ಆಕ್ರಂದ
ಬೀದಿಯಲಿ ಹಸಿವೆ ಜೊತೆ ನಭ ಮುಟ್ಟಿದೆ.
ಆದರೂ ನಮ್ಮ ಸೌಧದ ಪಾಯ, ಭಾವಣಿ, ವಾಸಗಾಲು
ಸುಭದ್ರ
ಏಕೆನ್ನುವಿರೋ ? ಅವುಗಳೀಟ್ಟಿಗೆ ಮಣ್ಣು ಜಲ್ಲಿಗಳು ನೀವು :
ನಿಮ್ಮ ಆತ್ಮಾರ್ಪಣ, ಸರ್ವಸಾರ್ಥಕ ಸಾವು.

ಹೆಸರಿಲ್ಲದಳಿದ ಪಟುಭಟರೆ, ಸಹಾಯಕ ನಟರೆ,
ದೈನಂದಿನದ ಏಕಗಾನತೆಯ ಹೊಟ್ಟನ್ನೆ ಮುಕ್ಕುತ್ತ
ದೇಶದೇಳಿಗೆ ಮರೆತು ವ್ಯಕ್ತಿಯಾಗಿರಲು
ಸ್ವಾರ್ಥದ ಹುತ್ತ
ನಮ್ಮ ವಿಸ್ಮೃತ ನಿರ್ಗಂಧ ಮತಿ ಸುತ್ತಮುತ್ತ
ಎಚ್ಚರದ ಪಂಜಾಗಿ ನೀವು ಧಗಿಧಗಿಸಿ ;
ಅನಿಂದ್ಯ ಪರಿಮಳವಾಗಿ ನಾಡ ಮಗಮಗಿಸಿ,

ಹಿಂಗಾದ್ರ ಮುಂದ ಹ್ಯಾಂಗ

—ಬಸವರಾಜ ಸಬರ

ಹಚ್ಚನ್ನ ಬನದಾಗ ಹಾಡ್ಯಾವ ಕೋಗಿಲೆ
ಕೇಳಬೇಕೆಂದರ ಕಿವಿಯಿಲ್ಲ। ನನ ಗೆಳೆಯ
ಗೋಳು ತುಂಬ್ಯಾವ ಕಿವಿ ತುಂಬ ॥

ಹೊಳಿಯು ದಂಡಿಯುವ್ಯಾಲ ಅಳಿಯದs ಐಸಿರಿ
ನೋಡಬೇಕೆಂದರ ಕಣ್ಣಿಲ್ಲ। ನನ ತಮ್ಮ
ಕಣ್ಣೀರು ತುಂಬ್ಯಾವ ಕಣ್ಣ ತುಂಬ ॥

ಮಲ್ಲೀಗಿ ವನದಾಗ ಮಕರಂದ ವಾಸನಿ
ಮೂಸಬೇಕೆಂದರ ಮೂಗಿಲ್ಲ। ನನ್ನಣ್ಣ
ದುರ್ವಾಸ ತುಂಬೈತಿ ಮೂಗ ತುಂಬ ॥

ಮಾವಿನ ಬನದಾಗ ನಗುತಾವ ಸಿಹಿಮಾವು
ತಿನ್ನಾಕ ನನಗೀಗ ಹೊತ್ತಿಲ್ಲ। ನನ ತಮ್ಮ
ಗುಂಡಿಟ್ಟು ಕೊಂದಾರ ನನ್ನ ಜನಕ ॥

ಕಂಟಿ ಕಂಟಿಯು ತುಂಬ ಸಿಹಿಜೇನು ತುಂಬೇತಿ
ಸವಿಯಾಕ ನನಗೀಗ ಹೊತ್ತಿಲ್ಲ। ನನ ಗೆಳೆಯ
ನಡ ಊರಾಗ ಸುಟ್ಟಾರ ನನ್ನ ಜನಕ ॥

ರಾಜ ಭವನದ ಮುಂದ ಸುಳಿವ ಸುಂದರ ಗಿಳಿಯೆ
ಮುಟ್ಟಬೇಕೆಂದರ ಕೈಯಿಲ್ಲ। ಗಿಳಿರಾಮು
ಕೋಳ ತೊಡಿಸಿಟ್ಟಾರ ಕೈಯ್ಯಾs ತುಂಬ॥

ಕೇಳಾಕ ಕಿವಿಯಿಲ್ಲ ನೋಡಾಕ ಕಣ್ಣಿಲ್ಲ
ನುಡಿಯು ಬೇಕೆಂದರ ದನಿಯಿಲ್ಲ। ನನ ಗೆಳೆಯ
ಹಿಂಗಾದ್ರ ಮುಂದ ಬದುಕ್ಯಾ್ಯಂಗ॥

ಕೋಳವ ಕಿತ್ತೊಗೆದು ಬೀಗವ ಮುರಿದೊಗೆದು
ಮೇಲಕ್ಕೆದ್ದರ ಮಾತ್ರ ಬದುಕೈತಿ। ನನ ತಮ್ಮ
ಇಲದಿದ್ರ ಮತ್ತ ದುಸ್ಥಿತಿ॥

ನೇಮವ ಕಿತ್ತಾ್ಯಕಿ ಹೋಮವ ಸುಟ್ಟಾ್ಯಕಿ
ದುಷ್ಟ ಶಕ್ತೀನ ದಮನ ಮಾಡಿದ್ರ। ನನ ಗೆಳೆಯ
ನಮಗಾಗ ಬದುಕು ಸಿಗತೈತಿ॥

ಅರ್ಥಗಳು

—ಜಿ. ಪಿ. ಬಸವರಾಜು

ಬಡಬಡಿಸುವವನ ಬಾಯಲ್ಲಿ
ಅರ್ಥಪೂರ್ಣವಾಗಿ ಉಳಿದು ಹೋದ ಮೌನ;

ಜನಸಂದಣಿಯ ರಸ್ತೆಯಲ್ಲಿ
ಸಲೀಸಾಗಿ ನಡೆದುಹೋದ ಕುರುಡ;

ಖಾಲಿ ಆಕಾಶದಲ್ಲಿ ಏನೋ
ಹೇಳ ಹೊರಟ ಮಿನುಗು ಚುಕ್ಕೆ;

ಯಾರೂ ಕಾಣದ ಕಾಡಿನಲ್ಲಿ
ಹಾಡೇ ಹಗಲು ಅರಳಿ ಬಾಡಿಹೋದ ಹೂವು;

ತುಂಬು ಗಾಂಭೀರ್ಯದ ಸಭೆಯಲ್ಲಿ
ಕಿಸಕ್ಕನೆ ನಕ್ಕ ಉಲ್ಲಾಸದ ಹುಡುಗ;

ರೈಲು ಹಳಿಗಳ ಉದ್ದಕ್ಕು
ಅನುರಣಿಸಿದ ಕೊನೆಕ್ಷಣದ ಮಾತುಗಳು;

ಹದ್ದಿನ ಬಾಯಲ್ಲಿ ಬಿದ್ದ
ಕೋಳಿಮರಿಯ ಜೀವಧ್ವನಿ;

ಹುಡುಕ ಹೊರಟವರಿಗೆ ಎಷ್ಟೊಂದು
ಚಿತ್ರಗಳು ಎಷ್ಟೊಂದು ಅರ್ಥಗಳು.

ಪ್ರೇಮ

—ವಿ. ಜಿ. ಭಟ್ಟ

ಪ್ರೇಮಿಸುವುದು ನೈಸರ್ಗಿಕ; ಸಹಜದ
ಚುಂಬಕ ಶಕ್ತಿಯು ಘಟನೆ
ಅದನು ಮಾಡಲೇ ಹೊರಟರಾಗುವದು
ಕೇವಲ ಹೊರವ್ಮೈ ನಟನೆ
ಅಂಥವ ಒಂಥರ ವಿಟನೇ
ಜೀವ ಜೀವಗಳ ಹತ್ತಿರ ಸೆಳೆವುದು
ಹೃದಯ ಚಿಮ್ಮಿ ಪುಟಪುಟನೇ

ಶರೀರ ಕಂಪಿಸಿ, ಎಲೆಗಳನೆಬ್ಬಿಸಿ
ಸಹ ತರಂಗದಲಿ ಬೆರೆಯೆ
ಒಂದಕೊಂದು ಆಕರ್ಷಿತವಾಗುವ
ತಬ್ಬುವ ಕಡಲಿನ ತೆರೆಯೇ
ಮಿಲನದಿ ಅಳಿದೇ ಹೋಗುತ್ತಿರುವದು
ಎರಡರ ನಡುವಿನ ಗೆರೆಯೇ
ಸುಖದಾಂಪತ್ಯವು ಸೆರೆಯೇ ?

ಪ್ರೇಮದಲಿರುವದು ಅಹಮಿಕ, ಸ್ವಯಂಮಿತ
ಅಳಿಯುವ ಭಾರೀ ಭೀತಿ
ಅಂತೇ ಪ್ರೇಮದ ಮಾತೆತ್ತದೆಯೇ
ಮದುವೆ—ಪುರಾತನ ರೀತಿ

ಕಾಮವಾಸನೆಯು ಸಂಬಂಧದಲೇ
ಸ್ಥಾಪಿತವಾಗಿಹ ಜಾತಿ/ಹೆಚ್ಚಿನ ಮಾನವ ಜಾತಿ
ಸಂಪರ್ಕದಿ, ಸಹವಾಸದಿ ಬೆಳೆಯುವ
ನಂಬುಗೆಯಾಗಿದೆ ಪ್ರೀತಿ.

ತೀವ್ರ ಇಳುವರಿ ಮಾರಾಟ

—ಭಾರತಿ

ಒಳ್ಳೆಯ ಬುದ್ಧಿ, ಸನ್ನಡತೆ ಬೇಕೆ
ಬನ್ನಿ
ಪಾಠಗಳ ಜನತಾ ಬಜಾರಿದೆ ಇಲ್ಲಿ
ನಾವು ಅಂಥ ಇಂಥವರಲ್ಲ
ಪಾಠಗಳ ಮಾರುವವರು ಸ್ವಾಮಿ
ನಾವು ಪಾಠಗಳ ಅರೆದು ಕುಡಿಸುವವರು
ಉತ್ಕೃಷ್ಟವಾದ ವಿಶಿಷ್ಟವಾದ ಪಾಠಗಳನ್ನೆ ತಾವು
ಬಯಸುವುದಾದರೆ ಕೇವಲ ಐದು ಸಾವಿರವಷ್ಟೆ.

ಸರೀಗ್ ಒಂದ್ ಹಾಕಿ ಒದೆಕೊಟ್
ಪಾಠ ಕಲ್ಸಿ ನಂ ಮಗಂಗೆ ಹೊಡೀರಿ ಬಡೀರಿ
ನಾವೇನ್ ತಿಳಿಯಾಕಿಲ್ಲ ನೀವಲ್ದೆ
ಇನ್ಯಾರ್ ಕಲೀಸಬೇಕು

ಎಂದು ಸುರುವ ತಾಯ್ತಂದೆಗಳ ಮಾತ
ಪಾಲಿಸುವವರು ನಾವು ಪಾಠ
ಕಲಿಸುವ ಗುರುಗಳು

ಸಿಟ್ಟು ಸ್ಟಾಂಡು ರೈಟು ರೀಡು.
ಕ್ಲಾಸ್ ವರ್ಕ್, ಹೋಂವರ್ಕ್ ಎಂದು

ಬಂದದ್ದು ಬಾರದ್ದು ಬರ್ದ್ದು ಬರ್ದ್ದು
ಎಳೀ ಕೈಗಳ ನೋಯ್ಸುವವರು,
ಕಣ್ ತೋಯ್ಸುವವರು

ಜ್ಞಾನದ ನಕ್ಷತ್ರವ ಹಿಡಿದು ಮಾಲೆ
ತೊಡಿಸುವ ನಾವು ನಿಮ್ಮ
ಮನದ ಸರಸತಿಗೆ ವಜ್ರದ
ಮೂಗುತಿಯ ಬೆಸೆಯುವೆವು
ನಿಮ್ಮ ಜೀವನದ ಬಣ್ಣದ ಟೀವಿಯ
ಕುಣಿಯುವ
ಗೊಂಬೆಗಳು

ಪೆನ್ನು

—ಮಹಾಬಲಮೂರ್ತಿ ಕೊಡ್ಲೆಕೆರೆ

ಪೆನ್ನು ಪಿನ್ನುಗಳಂತೆ
ಚುಚ್ಚುವುದಿಲ್ಲ, ಪೆನ್ನು ತನ್ನ
ಕಪಾಟಿನ ಒಂದು ಕಡೆ ತೆಪ್ಪಗೆ
ಬಿದ್ದ ಬಾವಲಿಗಳಂತೆ
ನಿರ್ಮೋಹ ಮತ್ತು ಕುರುಡು.

ನನಗೆ ಚಾಲನೆ ಬಂದಾಗ
ಬರೆಯಬೇಕೆಂಬ ತೆವಲು
ತಟಸ್ಥನಿಂತ ಘಂಕದ ಕಬಂಧ
ಬಾಹುಗಳಲ್ಲಿ ವಿದ್ಯುತ್ ಹರಿದಂತೆ
ಗರಗರ ತಿರುಗಿ ಗಾಳಿ
ಆಗುವ ಹಾಗೆ ಸರ ಸರ ಶಬ್ದ ಗೊಂಚಲು.
ಕಿರು, ಲಘು, ವಿಲಂಬಿತ ಉದ್ದುದ್ದ ಸಾಲು
–ಗಳಾಗಿ ಗೋಚರ ಪೆನ್ನಿನ ನಿರ್ನಾಳ ಅಳ

ಪೆನ್ನು ಭಿನ್ನವಾಗುವುದು
ಬರೆಯುತ್ತ ಹೋದಾಗ.
ಹೋದಂತೆ ಅದೇ ಒಂದು
ಕವನವಾದಾಗ.
ಕತೆ ಇಲ್ಲವೇ ಒಂದು ಪತ್ರವಾದಾಗ,

ಪೆನ್ನುಗಳಿಂದ ನಾನು
ಹೃದಯಂಗಮವಾಗಿ ನಾನೇ ಆಗುತ್ತೇನೆ.

ಪೆನ್ನು ನನ್ನನ್ನ ಮಾಡುವಷ್ಟು ಹೃದ್ಯ
ನಾನು ಪೆನ್ನನ್ನು ಮಾಡುವುದಿಲ್ಲ.
ಕೇವಲ ಕರಿದ್ರವದಲ್ಲಿ ಪೆದ್ದು ಪೆದ್ದಾಗಿರುವ
ಪೆನ್ನು ನನ್ನೊಳಗಿನ ಜೀವರಸ ಚಿಗಿಸಿ
ಅಕ್ಷರವಾಗಿಸುತ್ತದೆ. ಹಲವು ಗದ್ಯಗಳ
ಉಸಿರಾಗುವ ಪೆನ್ನು, ಹಸಿಯಾಗಿ
ಬಿಳಿ ಹಾಳೆಯ ನೆಲೆಗೆ ಛಾಪು ಬೀರುತ್ತ
ಹೋಗುವ ನಿಷ್ಕಾಮ ಕರ್ಮದಿಂದ
ಜಾರುತ್ತ ನನ್ನ ನಿಷ್ಕಾರಣ ಅಲಕ್ಷ್ಯದಲ್ಲಿ
ಪಕ್ಷ ಪಾತ ಹೊಂದುತ್ತದೆ.

ಬೇರೊಂದು ಪೆನ್ನಿನ ಬೆನ್ನಿಗೆ
ನಾನು ಮನವಿಡುತ್ತೇನೆ
ಹಳೆ ಪೆನ್ನು ಹಾಳಾಗಿ ಮೂಲೆಗುಂಪಾಗುವಾಗ.

ಆಹಾ ! ಹಕ್ಕಿಗಳು

—ನಾ. ಮೊಗಸಾಲೆ

ಆಹಾ ! ಹಕ್ಕಿಗಳು ಪ್ರತಿಮೆ ಉಪಮೆಗಳು
ಸೊಕ್ಕಿ ಹಾರೆ ಬಾನು
—ಕಾವ್ಯವಾಯ್ತು ; ಕಣ್ ತೆರೆದು ಅಂಗೈಗೆ
ಕರೆಯಾ ಅವುಗಳನ್ನು

ರೆಕ್ಕೆ ಪುಕ್ಕಗಳ ಬಣ್ಣ ಕಣ್ಣುಗಳ
ಒಳಗೆ ದೊಡ್ಡ ಗೋಳೆ
ಯಾವ ಹೊತ್ತಿಗೂ ಕರಗಿ ಹೋದೀತು
ಮಳೆಯು ನೀರ ಕುರುಳೆ

ಸ್ವರತಿ ಸಂಪ್ರೀತಿ ಬೇಡ ವಿರತಿ ಅತಿ
—ರೇಕ ಮೋಡ ನೆಲಕೆ
ಇಳಿವ ರೀತಿ ನವಮಾಸ ತುಂಬಿ ಬಾ
ತಕ್ಕ ತೊಡೆಯ ನಡುವೆ

ಗಾಳಿ ಸ್ವಚ್ಛಂದ ಬೀಸುತಿದ್ದರೂ
ತೊನೆವ ಕುಡಿಯು ನಭಕೆ
ನೀಡಿ ನಿಂತ ಮರ ನೀರ ಹೀರಲು
ಬೇರು ನೆಲದ ಒಳಗೆ

ಯಾವ ಪಂಥ ಮುಖವಾಡ ಇಲ್ಲದೆ
ಹಕ್ಕಿ ಕುಕ್ಕಿ ಕಣ್ಣು
ತಿನುವ ತೆರದಿ ನೀ ನನ್ನ ಅನುಭವಕೆ
ನೀಡು ಕಾವ್ಯ ಕಣ್ಣು

ಯಾವ ಹೊತ್ತಿಗೂ ನಿಲ್ಲಬಹುದು ಗಡಿ
–ಯಾರ ಭಾವಿ ಮುಗಿಯೆ,
ಒಬ್ಬನನುಭವನಿನ್ನೊಬ್ಬ ತುಳಿಯುವುದು
ಗಾಜು ತುಳಿದ ಹಾಗೇ !

ನಿನ್ನ ಹಣೆ ಪಟ್ಟಿ ಯಾವ ಜಗ ಜಟ್ಟಿ
ಕೆಳಗೆ ಬೀಳುವಾಗ–
ಎಲ್ಲಿ ನಿಂತೀತು ಬಾಳೆಯೂ ಗೊನೆ ಹಾಕಿ
ಬಿಡದೆ ತನ್ನ ಜೀವ ?

ಹುತ್ತ ಗಟ್ಟಿದರೆ ಚಿತ್ತ ಬ್ರಹ್ಮಾಂಡ
ನಮ್ಮ ಕಣ್ಣಿನೊಳಗೆ
ಕ್ರೌಂಚ ಪಕ್ಷಿಗಳ ಧ್ವಂಸ ನಡೆಯದೇ
ರಾಮ ಚರಿತೆ ಕೈಗೆ

ಎಣ್ಣೆ ಬೆಣ್ಣೆಯಲಿ ಯಾರ ಬಣ್ಣ ಬದ
–ಲಾಗದಣ್ಣ ಸೋನೆ
ಬತ್ತದಂತೆ ಮನ ಬತ್ತಲಾಗಿರಲು
ಕಟ್ಟಬಹುದು ಆನೆ.

ಆಹಾ ! ಹಕ್ಕಿಗಳು ಪ್ರತಿಮೆ ಉಪಮೆಗಳು
ಸೊಕ್ಕಿ ಹಾರೆ ಬಾನು
ಕಾವ್ಯವಾಗಿ ನನ್ ಕಣ್ಣ ಅಂಗಳದಿ
ಕಾಳು ತಿನಲಿ ಇನ್ನು

ವಿದಾಯ

—ಜಿ. ಎನ್. ಮೋಹನ್

ನದಿಯಾ ಕಮಾನ್ನೆ
ಮನದಾಳದಿ ಇಳಿದು ಕನಸುಗಳ ಕೆದಕಿದವಳೆ
ಕಂಬಿ ಎಳೆಗೆ ಆತುಕೊಂಡು ಅತ್ತ ಇತ್ತ ತೂಗಿದವಳೆ
ನೆಲಕೆ ಕಾಲು ಸೋಕಿದಾಗ ಬಿಕ್ಕಿ ಬಿಕ್ಕಿ ಅತ್ತವಳೆ
ಎದೆಯ ಝಲ್ಲರಿಯೊಳಗೆ ನೆನಪುಗಳನು ಕುಕ್ಕಿದವಳೆ
ಎದೆಯ ಕಾವಾಗಿ, ಚಿಗುರೊಡೆದು ಮೊಗ್ಗಾಗಿ
ಒಮ್ಮೆ ನೋಡುವ ಮುನ್ನ ಮರೆಯಾಗಿ ಹೋದವಳೆ
ಎದೆಯ ಕಂಬಿಯ ಮೇಲೆ ವಾಲುತ್ತಾ ನಡೆಯುತ್ತಾ
ಎಷ್ಟೊಂದು ಕನಸುಗಳ ಅಳಿಸಿ ಮರೆಯಾದವಳೆ
ಎದೆಯಾಳ ಗೋರಿಯಲಿ ಕಮಾನ್ನೆ ಅನುರಣನ
ಕನಸುಗಳು ಕುಡಿಯೊಡೆದಾಗ ನಿಶ್ಶಬ್ದ ನಿರ್ಗಮನ
ನಿನ್ನ ನೆನಪನು ಹೆಕ್ಕಿ, ಹಲವು ರೆಕ್ಕೆಯ ಹಕ್ಕಿ
ಪುನಃ ತಂತಿಯ ಮೇಲೆ ಬಾಗಿ ಬಳುಕಿ
ಇಳೆಗೆ ತಾಕುವ ಮುನ್ನ, ಶಬ್ದ ಜೀಕುವ ಮುನ್ನ
ಮತ್ತದೇ ಕ್ಷಣಗಳಲ್ಲಿ, ನಿಶ್ಶಬ್ದ ಮೌನದಲಿ
ತಣ್ಣನೆಯ ನಗೆ ಮಧ್ಯೆ ನನ್ನೆದೆಯ ಪಲುಕುಗಳು
ಬಿಕ್ಕಿ ಬಿಕ್ಕಿ

(ನದಿಯಾ ಕಮಾನ್ನೆ - ಜಿಮ್ನಾಸ್ಟಿಕ್ ವಿದಾಯ ಹೇಳಿದಾಗ)

ಸಂತೋಷ ಎಲ್ಲಿ ಹುಡುಕಲಿ ಹೇಳು ಗೆಳೆಯಾ

—ಕೆ. ಎಸ್. ರಾಜ (ನಂದಿ

ಸಂತೋಷ ಎಲ್ಲಿ ಹುಡುಕಲಿ ಹೇಳು ಗೆಳೆಯಾ
ಮುಗಿಲ ಜರಡಿಯು ಒಂದೊಂದು ತೂತು
ಮುಚ್ಚುತ್ತ ಮುಚ್ಚುತ್ತ ಬರುವಾಗಲೇ
ಕೆರೆ ಇಲ್ಲದ ನಮ್ಮ ನಗರದ ಎಮ್ಮೆ
ತೊರೆ ಬಿಡುತ್ತಿರುವಾಗಲೇ
ನನ್ನ ಗೆಳತಿ
ಹುಳ ತಿಂದ ಹೊಸತಿಲಿಗೆ ಜಾಜದ ಲಿಪ್‌ಸ್ಟಿಕ್
ಹಚ್ಚುತ್ತಿರುವಾಗಲೇ
ಮೈ ನೆರೆತ ಮಾವಿನ ಗಿಡಗಳು
ಮೊಲೆ ತೆರೆದುಕೊಂಡು
ಹೊರಟಿವೆ ಜಾತ್ರೆಗೆ ಜೋಡಿ ಜೋಡಿ.

ಸಂತೋಷ ಎಲ್ಲಿ ಹುಡುಕಲಿ ಹೇಳು ಗೆಳೆಯಾ
ಬೆವರಿನ ಓಕಳಿಯು ನೀರಿನಲ್ಲಿ
ಮುಳುಗಿರುವಾಗಲೇ
ಸತ್ತಿವೆ ನನ್ನ ಆಸೆಗಳು
ಆದಕ್ಕೆ :
ಗಿಡಮರಗಳಿಗೆ ಹೊಸ ಅಧಿಕಾರದ
ಚಿಗುರಿನ ಕಿರೀಟ ತೊಡಿಸಿದಾಗಲೇ
ಹೊಂಗಿರಣದ ಹರಕು ಚಪ್ಪಲಿ ಒತ್ತುವಾಗಲೇ

ಮಂದಗಾಳಿಯ ಮಂದಹಾಸ
ಗರ್ಭ ಜಾರಿದಂತೆ ಜಾರುತ್ತದೆ
ಹಕ್ಕಿಗಳ ಕಂಠಕ್ಕೆ ಕಚಗುಳಿ ಗುದ್ದುತ್ತದೆ.
ಆಗ ನನ್ನ ಗೆಳತಿ
ಅಕ್ಕಿಯ ಹರಳು ಹುಳ ಆರಿಸಿದಂತೆ ಆರಿಸಿ
ಬೇಜಾರಿನ ಮಗು ಹೆರೆಯುತ್ತಾಳೆ
ನನ್ನ ಮನೆಯ ದೀಪಗಳು
ಹುಡುಗಿಯರಿಗೆ ಕಣ್ಣುಹೊಡೆದಂತೆ ಮೂಡುತ್ತವೆ

ಗೆಳೆಯಾ :
ನನ್ನ ಗೆಳತಿ ಈಗೀಗ ಕೂದಲು ಕತ್ತರಿಸುವುದಿಲ್ಲ
ನಾಜೂಕಿನ ಸೀರೆ ಉಡುವುದಿಲ್ಲ
ಗಲ್ಲಕ್ಕೆ ಲಾಲಿಯಿಂದ ಮುದ್ದು ಕೊಡಿಸಿಕೊಳ್ಳುವುದಿಲ್ಲ
ಹಣ ಇದ್ದ ಬೇರೊಬ್ಬನನ್ನು ಕೂಡಿ
ಹೂ ಬಿಡುವುದು ಬಿಡಲಿಲ್ಲ
ಹೀಗಿರುವಾಗ
ಸಂತೋಷ ಎಲ್ಲಿ ಹುಡುಕಲಿ ಹೇಳು ಗೆಳೆಯಾ.

ಜಾಜ : ಕೆಮ್ಮಣ್ಣು

ಸಂಕ್ರಾಂತಿ

—ಬಿ. ಸಿ. ರಾಮಚಂದ್ರ ಶಮ

ತಲಿಗೆ ಕೊಡೆ ಹಿಡಿದು ಮೊಲೆಗಾಯಿ ತೂಗುವ ಮಾವು
ತಳಕ್ಕೆ ದಟ್ಟ ಹಬ್ಬಿರುವ ಕಪ್ಪು ನೆರಳು.
ತೊಡೆ ಗದ್ದುಗೆಗೆ ಬಂದು ಹೆಡೆಯೆತ್ತುವುದು ಕೂಸು–
ಎರಡೇ ಎರಡು ಹಲ್ಲೊಡೆದ ಬಾಯಿ,
ಎದೆ ಹುಲ್ಲಲ್ಲಿ ಹರಿದ ಪುಟ್ಟ ಬೆರಳು.

ರಾಜನಂತಃಪುರದ ಅರವತ್ತು ಹೆಣ್ಣುಗಳ
ಮೆರವಣಿಗೆ ಹೊರಟಂತೆ ಕಣ್ಣೆದುರಿಗೆ
ಆವಿ ಕವಿದು ಮಸುಕಾದ ಕಣ್ಣು ಕನ್ನಡಿಯೊಳಗೆ
ಒಂದು ದೇಹಕ್ಕಿನ್ನೊಂದು ಕತ್ತು,
ಒಬ್ಬಳಿದೆ ತುಟಿಹುಬ್ಬು ಬೇರೊಬ್ಬ ಚದುರೆಗೆ,

ಮಾವಿನೆಲೆ ಪಕ್ಕಕ್ಕೆ ಬೊಟ್ಟು ಕುಂಕುಮವಿಟ್ಟು
ಹಾರಿ ಹಾರಿ ಕೊನೆಗೆ ತಂಗಿದ ಪತಂಗದಂತೆ
ಹಿತ್ತಲಿನ ಬಾವಿಗೆ ಬಂದ ಬಹೂದಕ ನನ್ನ
ನೆನಪುಗಳ ತೊಡೆಯಲ್ಲಿ ತಲೆಯಿಟ್ಟು
ಮಲಗಿರುವ ಮಗುವೆ, ನಿನಗೆಲ್ಲಿ ಚಿಂತೆ ?

ನಿದ್ದೆ ಹೋಗಿದ್ದಾಗ ಅರವತ್ತು ಸಲ ಇಣುಕಿ
ಕಳ್ಳನ ಹಾಗೆ ಹೋದ ಭವಿಷ್ಯದತಿಥಿ.

ಬೆಂಕಿ ಬರಸಿಡಿಲು ಮಳೆಗಾಳಿ ಗರಗಸ ಕೊಡಲಿ
ಸುಟ್ಟು ಕೊಚ್ಚಿ ಕುತ್ತಿದರು ಕಾಲ
ಈ ಗಿಡದ ಬೇರು ಸುಭದ್ರ, ಯಾರ ಪ್ರೀತಿ ?

ಲೋಕ ತುಂಬಿ ಕಣ್ಣಲ್ಲಿ ತಣ್ಣಗೆ ಮಲಗಿರುವ
ಚೈತನ್ಯವೆ, ನಿದ್ದೆ ಕಳೆಯುವವರೆಗೆ
ನನ್ನವಾಗಲಿ ನಿನ್ನೆರಡು ತುಂಬಿಯಂಥ ಕಣ್ಣು.
ಸಂಜೆತನಕ ಮಲಗಿರು, ಮಗು. ಸಣ್ಣಗೆ
ತುಟಿ ಬಿರಿದ ನಗುವಿರಲಿ ಹಾಗೆ ಹಾಗೇ.

—೨—

ಆಕಾಶ ತೂಗಿಬಿಟ್ಟಿರುವ ಕಪ್ಪು ಮೋಡಗಳು, ನೋಡು–
ಹುಣ್ಣಿಮೆ ಇವೊತ್ತು ತಾನೇ ?
ಮುಂಗುರುಳಿನಂಚು ಕಟ್ಟಿರುವ ಹಣೆಯ ಮಧ್ಯಕ್ಕೆ ಬಿಂದಿ–
ಎಲ್ಲೆಲ್ಲು ತಾಯಿ ನೀನೆ

ಕಾಲು ಕಂಬಗಳು ನೂರು ತೆಂಗುಗಳು ತಲೆಗೆ ಹುಣ್ಣಿಮೆಯ
ಚಂದ್ರ, ಎಷ್ಟೊಂದು ದುಂಡು.
ತೆಂಗಿನೆತ್ತರದ ದೊಂಬರವಳವ್ವ, ಬೆರಳ ತುದಿಗಿಟ್ಟು
ಕುಣಿಕುಣಿಸಿದೊಂದು ಚೆಂಡು.

ಆ ಗೋಡೆಯಿಂದ ಈ ಗೋಡೆತನಕ ಈಸಾಡಿ ಹೊರಳಿ
ಬೆಳಕು ಮೀನಾದಂತೆ ಗಾಜಿನ ಮನೆ
ತೊಟ್ಟಿನೀರ ಹದಮುಟ್ಟಿ ನೋಡಿ ನನ್ನೆತ್ತಿ ಇಳಿಬಿಡುವ
ನಿನ್ನ ಕೈ ಬೆರಳು—ಬೇರೇನು ಕಾಣೆ.

—೩—

ಎಷ್ಟು ಬೇಗೆದ್ದೆ, ಮಗು. ನನ್ನ ಅನಂತರದ
ಲೋಕ ಅನಾಥವೆನುವಂಥ ಭ್ರಾಂತಿಯಿಲ್ಲ.

ರಾಶಿಬಿಟ್ಟು ರಾಶಿಗೆ ಹೋಗಬೇಕಾದರೂ
ನೆನಪುಗಳ ಹತ್ತು ಸವಕಲು ನಾಣ್ಯ
ಎಸೆದು ಕನಸು ಕಸಿಯುವ ಯಯಾತಿಯಲ್ಲ,

ಮಾವಿನ ಮರಕ್ಕೆ ಹಾರಿ ಕೂಗಿ ಕರೆದದ್ದು
ಕಾಗೆಯಲ್ಲ, ಮಗು, ಅದು ಕೋಗಿಲೆ.
ಹೇಳಿಬಿಡಲೇ ನನ್ನ ಅಂತಃಪುರದ ತರ್ಕ
ಸಲ್ಲದ ಹಾಗೆ ತೋಟ ಫಲ ತೂಗಿ
ಕರೆದಿದೆ ನಿನ್ನ–ಅದಕ್ಕಿಲ್ಲಿ ಬಾಗಿಲೇ ?

—೪—

ಸಂಜೆ ಸಂಜೆಗೂ ಕಂಡ ತಾಯಿ ಮಕ್ಕಳ ಮಿಲನ,
ಕೊನರಿ ಕಡಿದೆಸೆದ ಬಳ್ಳಿ ಪ್ರಾಣಗಳ ಬೆಸುಗೆ
ಕನಸು ನೆನಪು ಕಲಸುವ ನಿಮ್ಮ ಹದ ನನದಾಗಿ
ಮೂಡಲಿಗೆ ನಿತ್ಯ ಚಾಚಿ ಚಾಚಲಿ ಕೈಯಿ,
ಮೊಲೆ ಕೊಟ್ಟ ನೆಲಕ್ಕೆ ಜಯಕಾರದೊಸಗೆ.

ನೋವು

—ರಾಮದಾಸ್

ಎಂಥ ನೋವಿದೆಂಥ ನೋವು ಎಂಥ ನೋವಿದು ಬಲ್ಲೆಯ ?
ಕೊಳ್ಳಲಾಗದ ಕೊಡಲು ಬಾರದ ಉಳ್ಳ ಒಡಲನೆ ಇರಿಯುವ
ತಳ್ಳಲಾಗದ ತಡೆಯಬಾರದ ಹೃದಯದಾಳವ ಕೊರೆಯುವ
ಎಂಥ ನೋವಿದೆಂಥ ನೋವು ಎಂಥ ನೋವಿದು ಬಲ್ಲೆಯ ?

ನಿನ್ನ ದುಃಖವು ನನ್ನದೆನ್ನಲೆ ನನ್ನದೆಂದಿಗು ಆಗದು
ನನ್ನ ನೋವಿದು ನಿನ್ನದೆನಲೆ ನನ್ನ ಬಿಟ್ಟಿದು ಹೋಗದು.

ಹಸಿವು ಬಡತನ ಮಾನಭಂಗದ ನೋವನುಂಡಿಹ ಜನರಿಗೆ
ನನ್ನ ಸಾಂತ್ವನ ವಚನಗಾಯನವೇಕೆ ಸುಮ್ಮನೆ ಹೆಸರಿಗೆ !

ಕಾಡು ಗಿರಿಗಳ ಜನರಿಗಿರುವುದೆ ಹಾಡು ಹಸೆಗಳ ಸಂಭ್ರಮ ?
ಹಾಡಿದೆಲ್ಲವು ನಾಡ ಜನಗಳ ತುಟಿಯ ಮರುಕದ ವಿಭ್ರಮ !

ಬರಿಯ ಬುದ್ಧಿಯ ತರ್ಕ ಮಾರ್ಗವು ನೂರು ದಾರಿಯ ತೆರೆದಿದೆ
ಹೃದಯ ಹೃದಯದ ನಡುವೆ ಎಂದೊ ಇದ್ದ ಸೇತುವೆ ಮುರಿದಿದೆ,

ಇಲ್ಲಿ ಕೊಳುಕೊಡೆ ಇಲ್ಲವಾಗಿದೆ ನಯವೆ ವಿನಯವೆ ಏನಿದೆ ?
ಎಲ್ಲವೆಲ್ಲೆಡೆ ಆಳುವ ವ್ಯಾಪಕ ಅರ್ಥಸಾಧನವಾಗಿದೆ.

ಅದುವೆ ಕಾರಣ ನೀಡೊ ಕೈಗಳು ನೀಡಿ ನಿಂತಿವೆ ಬೇಡಲು
ದುಡಿವ ದಣಿವರು ಬೊಗಸೆ ತುಂಬದು ಬೇಡೊ ಕೈಗಳು ಬಾಡಲು.
ಎಳೆಯ ನೋವಿದು ಬೆಳೆಯ ನೋವಿದು ಬಾನು ಬುವಿಗಳ ನೋವಿದು !
ಮಾನವತೆಯನು ಮುಕ್ಕಿ ತಿಂದಿಹ ಒಳಗಿನಾಳದ ಸಾವಿದು !

ಮರೆತುಬಿಡು ಅವಳನ್ನು ಮನವೇ

—ಬಿ. ಆರ್. ಲಕ್ಷ್ಮಣರಾ

(ಗಜಲ್)

ಏಕೆ ಈ ನಿಟ್ಟುಸಿರು ? ಈ ವ್ಯರ್ಥ ಕಂಬನಿ ?
ಮರೆತುಬಿಡು ಅವಳನ್ನು ಮನವೇ,
ಅವಳೊಲವು ಮುತ್ತಲ್ಲ, ಮುಂಜಾವಿನಿಬ್ಬನಿ ;
ಮರೆತುಬಿಡು ಅವಳನ್ನು ಮನವೇ.

ನನ್ನ ಬಾಳಿನ ಸಿರಿಯೆ, ನನ್ನ ಹೃದಯದ ದೊರೆಯೆ
ಎಂದವಳು ನಿನ್ನೆ ತನಕ,
ಇಂದು ನಿರ್ಭಾವದಲಿ ಕೇಳುವಳು 'ಯಾರು ನೀ ?'
ಮರೆತುಬಿಡು ಅವಳನ್ನು ಮನವೇ.

ನಡು ನೀರಿನಲಿ ಭಗ್ನಪ್ರೇಮ ನೌಕೆಯ ಮೇಲೆ
ತೊರೆದು ಹೋದಳು ನಿನ್ನನಿಂತು ;
ಇನ್ನೂ ಕಾಯುವೆಯೇಕೆ ? ಅವಳಲ್ಲ ತಾರಿಣಿ :
ಮರೆತುಬಿಡು ಅವಳನ್ನು ಮನವೇ.

ನನ್ನ ದಿನಚರಿಯಲ್ಲಿ ಅವಳ ಹೆಸರಿನ ಕೆಳಗೆ
'ಕಣ್ಣು ತೆರೆಸಿದ ಹೆಣ್ಣು' ಎಂದು
ವಂದನೆಯ ಸಲಿಸಿ ನೀ ಬರೆದು ಬಿಡು ಟಿಪ್ಪಣಿ ;
ಮರೆತು ಬಿಡು ಅವಳನ್ನು ಮನವೇ.

ಕಾರಿರುಳ ಕತ್ತಲನು ಕಳೆವ ಪ್ರೀತಿಯ ಬೆಳಕು
ಅವಳಲ್ಲ ತಂಪು ಚಂದ್ರ ;
ಮಿಂಚಿ ಮರೆಯಾಗುವಳು ವಿಕಟ ಸೌದಾಮಿನಿ ;
ಮರೆತುಬಿಡು ಅವಳನ್ನು ಮನವೇ.

ಬಣ್ಣದ ಕೊಕ್ಕಿನ ಬಾನಾಡಿ ಹಕ್ಕಿ

—ಎನ್.ಎಸ್. ಲಕ್ಷ್ಮೀನಾರಾಯಣ ಭಟ

ಬಣ್ಣದ ಕೊಕ್ಕಿನ ಬಾನಾಡಿ ಹಕ್ಕಿಗೆ
ಮಣ್ಣಿಗಿಳಿಯುವ ತನಕ ಬಾಳೆ ಇಲ್ಲ
ಬಳ್ಳಿ ಗಿಡ ಮರ ಎಲ್ಲ ಬೀಜದಲೆ ಇದ್ದರೂ
ನೆಲದೊಡಲ ಕೃಪೆಯಿರದೆ ಸುಳ್ಳೆ ಎಲ್ಲ

ಬಣ್ಣದ ಕೊಕ್ಕಿನ ಬಾನಾಡಿ ಹಕ್ಕಿಗೆ
ಹಗಲಲ್ಲಿ ದಣಿವು ಆಲಸ್ಯ ಜೊಂಪು
ನಡುರಾತ್ರಿಯಲಿ ಚಿತ್ತ ಬೆತ್ತಲಾಗುವ ಹೊತ್ತು
ನೆಲಕಿಳಿದು ಹಾಡುವುದು ಏನು ಇಂಪು ?

ಹನಿವ ದನಿ ಎಳೆಗೂಡಿ ಎಳೆ ಎಳೆಯು ಹೊಕ್ಕಾಡಿ
ಏಳುವುದು ಹೊಳೆಹೊಳೆವ ಗಾನವಸ್ತ್ರ
ಅತ್ತ ಕನಸೂ ಅಲ್ಲ, ಇತ್ತ ನನಸೂ ಅಲ್ಲ
ಸಂಧಿನೆಲ ಕಾಣಿಸುವ ಸತ್ಯ ವಕ್ರ

ಹಕ್ಕಿ ಹಾಡುವ ಹೊತ್ತು ಸೊಕ್ಕಿರುವ ಜೀವಕ್ಕೆ
ನೆಲ ಬಿಟ್ಟು ನಿಂತಂಥ ದೆವ್ವ ದಿಗಿಲು
ದಿಗಿಲ ಬೆನ್ನಿಗೆ ಹಗಲು ಬಚ್ಚಿಟ್ಟು ಹೊರತೆಗೆವ
ನಿಧಿಯು ಪ್ರಭೆ. ಸಿಗದಿರುವ ದಿವದ ಕೊರಗು

ಹಾಡು ಕೇಳುವ ಹೊತ್ತು ಕಾಡು ಬೆಳೆಯುವ ಹೊತ್ತು
ಗುಡ್ಡ ನದಿ ಮಾತಾಡಿ ನಗುವ ಹೊತ್ತು
ನಕ್ಷತ್ರಗಳು ಡಿಕ್ಕಿಯಾಗಿ ಚಿತ್ರ ಸ್ಫೋಟ
ಬದುಕ ಬೆಳೆಸುವುದು ಕವಿಗಷ್ಟೆ ಗೊತ್ತು

ದರ್ಶನ

—ಬಿ. ಟಿ. ಲಲಿತಾ ನಾಯಕ

ದೂರ ನೋಟಕೆ
ನೀ ಬೋಳಾಗಿ ಕಂಡಿದ್ದೆ
ನೆಲದಲ್ಲಿ ಬೇರೂರಿ
ಮುಗಿಲ ಗೆಳೆತನ ಬೆಳೆಸಿದ್ದೆ

ನಿನ್ನ ಈ ಭವ್ಯತೆಗೆ
ನಯಗಾರಿಕೆಗೆ
ನಾನೆಂದೂ ಮನ ಸೋಲಲಿಲ್ಲ
ಮುದಗೊಳ್ಳಲಿಲ್ಲ.

ಕರಿಯ ಕಗ್ಗಲ್ಲುಗಳ ಮೊತ್ತ
ನಿನ್ನ ಜಡ ಅಸ್ತಿತ್ವ
ನೋವು ನಲಿವಿನನುಭವದಿಂದ
ಎಂದೆಂದಿಗೂ ನೀ ವಂಚಿತ
ಎಂದೇ ನಾ ಭಾವಿಸಿದ್ದೆ.

ಆದರೆ
ಅಚಾನಕ ಒಮ್ಮೆ ಹತ್ತಿರಕ್ಕೆ ಬಂದೆ
ದೊಗರು ಬಗರೇ ನಿನ್ನ
ವೈಶಿಷ್ಟ್ಯವಾಗಿರುವುದ ಕಂಡೆ

ಒಡಲ ವೈಚಿತ್ರ್ಯಕ್ಕೆ
ರೋಮಾಂಚಗೊಂಡೆ !

ಒತ್ತೊತ್ತಿ ಪೇರಿಸಿದ
ಹೆಬ್ಬಂಡೆಗಳ ನಡುವೆ
ಮೆತ್ತಿಕೊಂಡಿತ್ತು ಮಣ್ಣ ಹೆಂಟೆ
ಗುಪ್ತಜಲ ಸ್ರವಿಸಿ
ಗರ್ಭಕಟ್ಟುತಲಿತ್ತು
ನಗುನಗುತ ನಿಗುರಿ ನಿಲ್ಲುತ್ತಿತ್ತು
ಹಚ್ಚ ಹಸುರಿನ
ಚಿಗುರು ಗಿಡಗಂಟೆ !

ಜಾನುವಾರುಗಳು
ನಿನ್ನೆದೆಯನೇರಿದವು
ಅದ ಮನಸಾರೆ ಮೇಯ್ದು
ತಣಿದವು . . . . . .

ಬೆಟ್ಟ,
ನಿನ್ನಂತೆ ಈ ನೆಲದಾಳದಲಿ
ಕಾಲೂರಬಲ್ಲೆನೇ ನಾನು ?
ಮುಗಿಲೆತ್ತರಕೆ ಬೆಳೆದು
ನೋವರಿಯ ಬಲ್ಲೆನೆ
ಸ್ಪಂದಿಸಬಲ್ಲೆನೆ ನನ್ನವರ
ಬೆಂದೊಡಲ ದನಿಗಳಿಗೆ ?

ದಯವಿಟ್ಟು ವಿವರಿಸು —
ಪಾಷಾಣ ಹೃದಯದಲಿ
ಜೀವರಸ ಬುಗ್ಗೆ ಚಿಮ್ಮುವ

ಪರಿಯ !
ಕಲಿಯಂ ಬೇಕಿದೆ ಪಾಠ
ನಿನ್ನ ದಮ್ಮಯ್ಯ

ನೊಂದು ಬರೆದ ಗೆಳೆಯರಿಗೆ ಉತ್ತರ

—ವೀಚಿ

ಉತ್ಪತ್ತಿಯು ಹಣ್ಣಿನಂತೆ ರುಚಿ ಹುಣ್ಣಿಮೆ ಚಿತ್ರ
ತೊಳೆದಮುತ್ತು ಹೊಳೆವಬಾನು ಶುಚಿಶುದ್ಧವು ಹಸ್ತ.
ಸುಖದುಃಖದ ಗೊಂಚಲಾದ ಮಿಂಚು ಮಿನುಗುಗಣ್ಣು.
ಜಗದ ತಾರತಮ್ಯದೊಳು ವಿಷಾದಗೊಂಡ ಮೊಗವು.
ಕಹಿಯುಂಡೂ ಅಹಿಯಾಗದೆ ಉಳಿದೆಯೆಲ್ಲ ಹೇಗೆ ?
ಮೇಲೆ ಕೆಳಗೆ ಒಳಗೆ ಹೊರಗೆ ಹೊತ್ತಿ ಉರಿವ ಬೇಗೆ.

ಗೊತ್ತಿಲ್ಲದೆ ಬಂದುದಾಯ್ತು ಮುಗಿಯೆ ಪಯಣವೆಲ್ಲಿಗೊ
ಎಳೆಬಿಸಿಲೂ ತಿಳಿಹಸಿರೂ ಎದೆ ತುಂಬಿ ಗಿಳಿಸಾಲು.
ಹುಟ್ಟಿದೂರ ನೆನಪ ಸವಿರು ಚಿಗಿತ ಹೂವು ಹೊಂಗೆಯೊಡಲು
ಮೀನ ಬೆನ್ನಮೇಲೆ ಬೆಳ್ಳಿಬೆಳಕಸುರಿವ ಸೂರ್ಯನಿರಲು.

ನೆಲದ ಗರುವ ಮೊಳೆತ ನಗೆಗೆ ಎಂಥ ಪ್ರಬಲ ಇಚ್ಛೆಯು–
ಮಾರ್ಕ್ಸ್‌ವಾದವೊ ಮಾನವತೆಯೊ ಎಲ್ಲವು ಆಸ್ವಾದ್ಯವು,
ಉಸಿರ ಬಲವನಡುಗಿಸುವೊಲು ತೀವ್ರತೆಗಳ ತುಮುಲವು
ಕಹಿಯುಂಡೂ ಅಹಿಯಾಗದೆ ಉಳಿಯಬೇಕು ಹೀಗೆಯೆ
ಮೇಲೆ ಕೆಳಗೆ ಒಳಗೆ ಹೊರಗೆ ಹೊತ್ತಿ ಬೆಳಕಿಗಾಗಿಯೆ.

ಇವರು

—ಕುಂ. ವೀರಭದ

ಹುಲಿಗುಡ್ಡ ತಪ್ಪಲಲಿ ಹಸಿರು ನೋಟನು ಕಂಡು
ಹಸಿರು ಗರಿಗಳ ಬಿಚ್ಚಿ ನವಿಲಾದರೋ
ಬಟ್ಟೆಯಂಗಡಿ ಮುಂದೆ ಚಿಗರೆಗಂಗಳ ನಡುವೆ
ಪದ್ಯ ಒಸೆಯುವ ಒದ್ದೆ ಕವಿಯಾದರೋ

ರಾತ್ರಿ ಮೌನಕೆ ಬೆಚ್ಚಿ ಬಾಟಲಿಯ ಸದ್ದಿಗೆ
ಗಿಟಾರವೊಂದರಲಿ ಹಾಡಾದರೋ
ಮಾಮರದ ತಳಿರಲ್ಲಿ ಹಸುಳೆಗಂಗಳ ಮುಡಿಸಿ
ಹಕ್ಕಿ ಕಂಠದಿ ಉಕ್ಕಿ ಸ್ವರ ತೆರೆದರೋ

ಮಸಣದಲಿ ರಂಗೋಲಿ ಕೃಷ್ಣಮೃಗ ಚಂಚಲದಿ
ಮುಗಿಲ ಹೆರಳಲಿ ಬಿರಿದು ಮಿಂಚಾದರೋ
ಬಸಿರಿನೊಳಗಿನ ಕೂಸ ಎಳೆಯಗಣ್ಣಿನ ನಿದ್ದೆ
ದುಡಿವ ಬೆನ್ನೆಲುಬಲ್ಲಿ ನೆಣವಾದರೋ

ಸಣಕಾಲು ಸರಪಳಿ ದುಂಡುಹೊಟ್ಟೆಯ ಒಳಗೆ
ಚಂಡಮಾರುತವಾಗಿ ಗುಳೆಕಿತ್ತರೋ
ಕರುಳ ಕಾಡಲಿ ದಾರಿ ತಪ್ಪಿದರು ಕೆಲಬಾರಿ
ಅಂಡಲೆದು ಹಳವಂಡ ಕನಸಾದರೋ

ಶ್ರಾವಣದ ತುಂತುರಿಗೆ ಚಿಗಿಯುಲೊಲ್ಲದ ನೆಲದಿ
ಗುಂಗಾಡಿ ಹುಳ ತವರ ಬಿರುಕಾದರೋ
ಬಯುಲ ಹಾದಿಯು ತುಂಬ ಮರಳು ಬೆಟ್ಟಗಳಾಗಿ
ಲಕ್ಷ ರೆಕ್ಕೆಯು ಬಿಚ್ಚಿ ಮುಗಿಲಾದರೋ :

ಕೋಟಿ ಕಣ್ಣುಗಳಲ್ಲಿ ಈಟಿ ಶಸ್ತ್ರವ ತುಳುಕಿ
ಜಠರದಗ್ನಿಗೆ ರಕ್ತ ಬೆವರಾದರೋ
ವರ್ತಮಾನದ ಕ್ಷುದ್ರ ವಾಮನವತಾರಕ್ಕೆ
ಸಿಡಿಯುಲಾರದೆ ಇವರು ಬಲಿಯಾದರೋ

–ಗೆ

—ವೇಣುಗೋಪಾಲ ಸೊ

ಹೀಗೆ ಎಷ್ಟೋ ಬಾರಿ ಹೂವುಬಿಡಿಸುತ ನಿಂತ ನಿನ್ನನ್ನ
ಕಂಡಿದ್ದೇನೆ : ಕಾಣದ ಮುಖದ ನೆರಿಗೆಗಳ
ತೀಕ್ಷ್ಣಗೊಳಿಸುವ ನೆರಳಿನ ಬಿಳಿಲುಗಳ
ಬಿಡಿಸಿ ನೋಡಿದ್ದೇನೆ : ನೀನೇನೆ ಮೈಮುರಿವ
ಆದಿನಗಳೊಡ್ಡಿದ ಹೆಣ್ಣು ? ಪ್ರಶ್ನಾತೀತ
ವಾಗಬಲ್ಲಂಥ ಆ ಆದಿಮದ ಕಣ್ಣು ?

ನಿನಗೆ ಗೊತ್ತಿಲ್ಲದೆಯೆ ನನ್ನೆದೆಯೊಡ್ಡು
ಮುರಿದೊಡೆದು ಧಾವಿಸಿದೆ : ಭಾವಿಸಿದೆ
ನಿನ್ನೊಡ್ಡುವಿಕೆಯಲ್ಲೆ ದೃಶ್ಯಶ್ರವ್ಯ ವಿಲಾಸೋಚಿತ
ಹರವು–ಮುರಿವು ! ಇದೋ ಈ ಪ್ರತಿಯೊಂದು
ನಳನಳಿಸಿದ್ದೆ ನಿನ್ನ–ನನ್ನಗಳ ಕೊಡುಕೊಳೆಯು
ಸಮೃದ್ಧಿ ! ಕೇಳದೆಯೆ ದೊರೆತದ್ದು ಕೂಡಿ
ಕೊಳ್ಳದೆಯೆ ಕವಲೊಡೆದು ಚಾಚಿದ್ದು
ಹಗಂರವಲ್ಲದ ಮಧುರ ಮಾರ್ತಾಂಡ !

ಬೇಡವೆನ್ನದಿರೆಂದು ಬೇಡಿಕೊಳ್ಳುವುದೇನು ?
ಗುಡಿಗಟ್ಟಿದರೆ ಮಹಾಗಾಢತೆಯ
ಪರಿತಾಪಕೊಡ್ಡಿದ ಮುಡಿಪೆ ! ಸಾಕಾರ

ಗೊಳ್ಳುವ ಕಾವಿಗೆಲ್ಲಿದೆ ಮುಗಿವು ?
ನೀ ಬಿಡಿಸುವೊಂದೊಂದು ಹೂವಿಗೂ
ಹೊಸಜನ್ಮ ತರುವ ಬೀಜದ ಕ್ಷೇತ್ರವೆ—
ನಿರಂತರವೆ ! ಒಡ್ಡಿದ ಒಡಲಿಗೆ ತುಂಬಿ
ಕೊಳ್ಳುವುದೇನೆ, ನನ್ನ ಕಾಡುವ ಕೊರಗೆ ?

ಹವಳ ಕೆಂಪಿನ ಸಂಜೆ

—ಎಚ್. ಎಸ್. ವೆಂಕಟೇಶ ಮೂ

ಹವಳ ಕೆಂಪಿನ ಸಂಜೆ – ಸುಳಿವ ತಣ್ಣನೆ ಗಾಳಿ
ಹುಲ್ಲು ಬಯಲಲಿ ನೀನು ಬರದ ಹಾದಿ

ಹೊತ್ತು ಮುಳುಗುವ ಸಮಯ–ಸೂರ್ಯ ದಹಿಸುವ ಹೃದಯ
ದೂರದಲಿ ನೆರಳು–ಮನ ತೊರೆದ ಕನಸು

ಪ್ರಿಯತಮನ ಹಾಡು–ಗರಿಕಿತ್ತ ಹಕ್ಕಿಯ ಪಾಡು
ಇರುಳು ನರಳಿದೆ – ನೀನು ಬರದ ಹಾದಿ

ಕಣ್ಣ ಮೀನಿದೆ ಕಂಬನಿಯ ಕಿರುಗೊಳದಲ್ಲಿ
ನೋಟ ಕರಗಿದ ಮತ್ತು ವಿರಹದುರಿಗೆ

ನೀನು ಬಂದರೆ ಕೊರಡು ಹಾದಿ ಕೊನರಿಟ್ಟೀತು
ಹಸುರಾಗಿ, ಹೂವಾಗಿ, ಹಣ್ಣು ತೂಗಿ

ನೀ ಬರದೆ ಹೋದರೆ ದಾರಿ ನನ್ನೆದೆ ತೂರಿ
ನಿನ್ನ ಕೊರಳಿನ ಪದಕ ನನ್ನ ಹೃದಯ

ಕಿನ್ನರಿಯರು ಹಾಡಿದರು

—ವೈದೇಹಿ

ಬೆಳಗಾಯಿತೂ ಕೋಳಿ ಕೋಗಿತೂ
ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು
ನಡೆದಾ ಬಂದಾ ಬಂದಾ ಬಂದಾ
ಸರ ಸರ ಬಂದಾ ನಂದಾ ಎಂದು

ಜಾಗರ ಕಣ್ಣೆಸಳಲ್ಲಿ ಕಾದೂ ಕುಳಿತಳು
ಬಾಗೀ ಕಾದಳು, ಕೆಂಪಾಗೀ ಕಾದಳು
ಕಸ್ತ್ವಂ ಕೋ ಹಂ ಕುತ ಆಯಾತಃ
ಅಸ್ಪಷ್ಟ ಪಟ ಹರಿದು ಧೂಳೀ ಹಾರಿ

ಕರೆದಳು ಕನ್ನಿಕೆ ಕೂಗದೆ
ಸೊಲ್ಲು ತೂಗದೆ
ಗಂಧರ್ವ ಪುರುಷನೆ ಬರಬಾರದೆ ?

ಹಗಲೂ ಮುಗುಚಿ ಇರುಳಾಗಿ ಕರಟಿ
ಕ್ಷಣ ಕಣ ಮುರುಟೀ ಮುರುಟಿ
ಹುಸಿಗಾಳಿ ಮುಷ್ಟಿಗೆ ಸಿಕ್ಕಿ
ಆಸೆಯ ಕಂದೀಲು ನೊಂದದಂತೆ
ಮುರುಗು ಸೆರಗನ್ನು ಮರೆಮಾಡಿ
ಮುರುಗು ಸೆರಗನ್ನು ಮರೆಮಾಡಿ ಕುಳಿತಳು
ಆಕಾಶದ ಕೆಳಗೆ ಏಕಿನಿ ಆಕೆ
ವಿರಹಿಣಿ ಹೆಣ್ಣಿಗೆ ನಾವೆಲ್ಲ ಬೇಕೇ ?

ಬಾಗಿಲು ಅಂಗಳ ಜಗಲೀ ಅಗಳಿ
ಅಗುಳೀ ತೆಮೆಕೋಲು ಕಿರುಗುಡುವ ಲಾಲಿ
ಆಲಿಸಿ ಕಾದಳು ನಂದಲಾಲನನ್ನು
ಬೇಡಿಕೊಂಡಳು, ಹೋಯ್, ತಾರಕೆಗಳನ್ನು !

ಏನ ಬೇಡಿದಳು ತಾರಕೆಗಳನ್ನು ?
ತಾರಮ್ಮಯ್ಯ ತಂದು ತೋರಮ್ಮಯ್ಯ
ಇಂದಿರ ಮಂದಿರನ ನನ್ನ ಸುಂದರ ಚಂದಿರನ
ಎಲಲಾ ಎಲಲಲ್ಲಾ ಇಂಥ ಮುರುಳಿಯುಂಟೇ
ಲೋಕದಲ್ಲಿನ್ನು

ಎಂದಾದರೂ ನಮ್ಮ ತಾರಮ್ಮಯ್ಯ
ಕರೆತರುವಳಂತೇನು ಚಂದಿರನನ್ನು
ಗಂಧರ್ವನನ್ನು ?

ಮುಂದಿನ ನುಡಿ ಯಾತಕ್ಕೆ, ಕೇಳದಿರಿ ಯಾರೀಕೆ
ಮುಡಿಗಟ್ಟಿ ಮೂಲೆಗಿಡ ಶಂಕೆಮಾಲಿಕೆ
ಯಾರಾದರೇನಂತೆ ಲೋಕಗೀತದ ಕಥೆಗೆ
ಮಡಿಯುಂಟೆ ಜಾತಕ ಪಕ್ಷೀಗೆ ?
ಜೊತೆಗೂಡಿ ಬನ್ನೀ ಬನ್ನೀರೆ

ಮುರುಳೀ ಮಣಿಯೆಂಬ ಹೆಸರ ಹಾರವ ತೊಡಿಸಿ
ಆರತಿ ಎತ್ತೋಣ ಶುಭ ಎನ್ನೀರೆ
ಆರತಿ ಹಾಡಿಗೆ ಒಗಟ ಪದಕವನ್ನಿಟ್ಟು
ಎತ್ತಿರಿ ಆರತಿ ಕಿನ್ನರಿಯರೆ

ಗುಬ್ಬೀ ಗೂಡೀನಲ್ಲಿ ಮುರುಳಿ ಮಣಿಗೆ
ಕಿವುಡು ಪ್ರೇಮದ ಜೊತೆಗೆ ಮೂಕ ಬಾಯಾರಿಕೆ

ಚಿಂವ್ ಚಿಂವ್ ಚಿಂವ್ ಚಿಂವ್
ಚಿಂವ್ ಚಿಂವ್ ಚಿಂವ್ ಚಿಂವ್
ಈ ಒಗಟ ಪದಕವ ಬಿಡಿಸಿದಿರೆಂದರೆ
ಸುಖ ಹಾಸಿ ಬರುವುದು ಇಡಿಲೋಕಕ್ಕೆ

ಆಕಾಶದಡಿಯಲ್ಲಿ ಏಕಿನಿ ವಿರಹಿಣಿ
ಏಕಾಂತವುಂಟು ಅವಳುಂಟು.
ತೆರಳುವೆವು ನಾವೆಲ್ಲ ನಂನಮ್ಮ ನಾಡೀಗೆ
ಆಕಾಶವುಂಟು ಅವಳುಂಟು !

ಕಾಯಕಲ್ಪ

—ಎಂ. ಎಸ್. ವ್ಯಾಸರಾವ್

ಸಂಜೆ ಹೊತ್ತಿಗೆ ಯಾನ ಪೂರೈಸಿದ
ಬೆಸ್ತ ಮಕ್ಕಳು ಬರಿಗೈಲಿ ಬರಲಿಲ್ಲ
ಕೊಪ್ಪರಿಗೆಯಷ್ಟು ಮೀನು ಕಿಕ್ಕಿರಿದ
ದೋಣಿ ದಡ ತಲುಪುವುದು ನಿತ್ಯ ನೋಟ.

ದಣಿದಿದ್ದ ಆ ಮುಖಗಳಲ್ಲಿ ಎಂಥ
ನೋಟವಿತ್ತು ! ಸಾಕಾಗುವಷ್ಟು ನಾಳೆವರೆಗೂ !

ಇದುವರೆಗೂ ಬೆರಗಾಗಿ ನೋಡಿದ್ದು
ಸಾಕು ಮಗು ; ಮರಳ ಹೆಜ್ಜೆ ಅಳಿಸಿಹಾಕು
ಅಲೆಮಾರಿ ನೊರೆಗುಳ್ಳೆ ಪಚ್ಚೆ ಮುತ್ತಲ್ಲ
ಸಮುದ್ರದಾಳಕ್ಕೆ ಮುಳುಗು ಹಾಕು

ಪಾತಾಳಗರಡಿ ಬಿಟ್ಟು ತಳ ಬೆದಕು
ಪುಟಿದು ಬರಲಿ ಒಳಗಿರುವ ಬೆಳಕು

—೨—

ರಂಗಿನರಮನೆಗೆ ದಂಗಾಗದಿರು
ಗುಡಿಸಲಲ್ಲೂ ಹರಡಿದೆ ಚಿಮಣಿ ಬೆಳಕು
ತುಕ್ಕು ಬಿದ್ದವುಗಳಿಗೆ ಧೂಳು ಕೊಡವು
ಪುಟವಿಟ್ಟು ಬೆಂಕಿಯಲ್ಲಿ ಆಕಾರ ನೀಡು

ಯಾವ ನೆಲವಾದರೇನು ಬೀಜಕ್ಕೆ
ನೀರು ಸೋಕಿದ್ದೇ ಜಗಿವ ಆತಂಕ
ವೃಕ್ಷವಾದರಷ್ಟೇ ಪೂರ್ಣವಿಕಾಸ
ಹತ್ತಾರು ಬಾಯಿಗನಿವಾರ್ಯ ಅಲ್ಲಿ ತನಕ

ಪಾಠ ಕಲಿತದ್ದು ಸಾಕು ಇನ್ನು ಹೊರಡು
ದಂಡಕಾರಣ್ಯ ಸೇರು ಬಿಡು ಅಲ್ಲೆ ನಿಲ್ಲು
ಕೋಶ ಒಡೆದು, ತೊಡು ಹೊಸ ಕಾಯಕಲ್ಪ
ಆಗು ನಿನ್ನ ಬಲದಿಂದಲೇ ಯಾಜ್ಞವಲ್ಕ್ಯ

ಆಹ್ವಾನ

—ಶಶಿಕಲಾ ವಸ್ತ್ರದ

ಬದುಕೇ
ಬೆಟ್ಟದಷ್ಟಿರುವ ಕಷ್ಟಗಳ ಭಟ್ಟಿಯಲ್ಲಿ
ಸುಟ್ಟರೂ ನೀನನ್ನ ಬೂದಿಯಾಗುವೆನೇ ?
ಮಡಕೆಯಾಗಿ ಬರುವೆ
ನಾ ಸಿಹಿನೀರು ತುಂಬಿ ತರುವೆ.
ರಸಹೀರಿ ಕಸವೆಂದು ತಿಪ್ಪೆಯಲ್ಲಿ
ಚಲ್ಲಿದರೂ ನೀನನ್ನ ಪಲ್ಲವಿಸದಿರೆನೇ ?
ಗೊಬ್ಬರವಾಗಿ ಮರಳಿ, ನಿನ್ನಡಿಗೆ
ಹೂವರಾಶಿ ತರುವೆ.
ನೂರಾರು ರೀತಿಗಳ ಯಾತನೆಯ ಕಲ್ಲಿನಲಿ
ತೇದರೂ ನೀನನ್ನ, ಆವಿಯಾಗುವೆನೆ ?
ಶ್ರೀಗಂಧವಾಗಿ ಬರುವೆ
ನಾ ಚಂದನದ ಮಾತು ತರುವೆ
ಎದೆದುಂಬಿ ನಗುವಾಗ ಸಂತಸದ ಗಳಿಗೆಯನು
ಕಸಿದರೂ ನೀನನ್ನ ಕುಸಿಯುವೆನೇ ನಾನು ?
ಹುಸಿನಗುವ ನಗುತಲಿರುವೆ
ಹೊಸಹೊಸತು ಕನಸ ಹೆಣೆವೆ
ಸಿಹಿತುಂಬಿ ತಂದ ಎದೆಬೊಗಸೆಯಲ್ಲಿ
ವಿಷ ಹಾಕಿ ಅಪಹಾಸ್ಯಗೈದರೂ ನೀ ನನ್ನ

ಕಂಗೆಡುವೆನೇ ನಾನು ?
ಒಡಲುಡಿಯು ತುಂಬಿ ನಿಲುವೆ
ಸಿಹಿಜೇನ ನಿನಗೆ ಎರೆವೆ
ಜೀವನೋತ್ಸಾಹದಲಿ ಉಕ್ಕುಕ್ಕಿ ಹರಿವಾಗ
ರಸಭಾವದಲೆಗಳನು ಬತ್ತಿಸಿದರೂ ನೀನು
ಒಣಗುವೆನೆ ನಾನು ? ಕಡಲಾಗಿ ಸೊಕ್ಕಿ ಮೆರೆವೆ
ಒಡಲುದ್ದ ಮಿಕ್ಕಿ ಮೊರೆವೆ.
ಇನ್ನೂ ಇನ್ನೂ ಇನ್ನೂ ಬದುಕ ಬಯಸುವ ನನ್ನ
ಖಿನ್ನತೆಯ ಮುಪ್ಪಿನಲಿ ಸವೆಸಿದರೂ ನೀನು
ಸಾಯುವೆನೆ ನಾನು ? ಮರುಜನ್ಮ ತಾಳಿ ಬರುವೆ
ನಿನಗೆ ಧನ್ಯವಾದ ತರುವೆ

ಮಹಾಬಲಿಪುರ

—ಎಚ್. ಎಸ್. ಶಿವಪ್ರಕಾಶ್

ಕಡಲ ತೀರದ ಅಲೆಯ ಸೋಂಕು
ಕಣ್ಣಲ್ಲಿ ಹಸಿರೆನ್ನು ತುಂಬುತ್ತದೆ
ಮಡಿಲಲ್ಲಿ ಕಟ್ಟಿಕೊಂಡು ಸೂರ್ಯಕಿರಣಗಳನ್ನು
ಹಡಗುಗಳನ್ನು ಸೋಲಿಸಿ ಬೆಳಕು ಓಡುತ್ತದೆ

ಕಡಲ ತಳದಲ್ಲಿ ಪಳೆಯುಳಿಕೆಗಳ ಬಳಗಗಳ
ಬಳಿ ಬೆರೆತು ; ತನ್ನ ಮರೆಯಲು ಮನಸು
ಇಳಿಯುತ್ತದೆ ; ಪಾಚಿಕಟುಡಿಗೆಗಳಲ್ಲಿ
ತೊಳಗಂತ್ತದೆ ;

ಈ ಘೋರ ಜಲದ ಮರ್ಮರ ;
ಈ ಹಸಿರ ಕುರುಡು ಸಂಸಾರ ;
ಜೀವ ನೀರಾಗಿ ಮೀನುಗಳಲ್ಲಿ,
ಮೊಸಳೆ ತಿಮಿಂಗಿಲಗಳಲ್ಲಿ

ಕಿವುಡು ಮುಳುಗಿನ ಒಳಗೊಳಗೆ
ದಾವಾನಲನ ನೆನಪು ಸುಳಿಯುತ್ತದೆ ;
ಅಲೆಯು ತಲೆ ಬಾಚಿ,
ಮರಳ ಕುಂಚಕೆ ಕೈ ಹಿಡಿದು ತರುವ
ಗಾಳಿ ಕಣ್ಣುಗಳನ್ನು ತೆಗೆಯುತ್ತದೆ

ಮತ್ತೆ ಬಿಸಿಲಿನ ದಾಹ,
ಅದಕೆ ಗಾಳಿಯ ಸ್ನೇಹ
ಮುಕ್ಕಾದ ಮೂರ್ತಿಗಳೇ ಕಲ್ಲುರಥಗಳೇ
ಕಪ್ಪಗಿದ್ದರೂ ಗಟ್ಟಿಹಾಲುಣಿಸುವ ತಾಟಿ ಮರ ಸಾಲುಗಳೇ

ಕಡಲಿನಪ್ಪುಗೆ ಬೆಚ್ಚಿರುವ ಮರಳು ಹಾಸುಗಳೇ
ಅದುಮಿಕೊಳ್ಳಿರೆ ನನ್ನ ನಿಮ್ಮೆದೆಗೆ ;
ಬಿಸಿಲಿನೊಡವೆಯ ತೊಡಿಸಿ
ನೀಲಿ ಬಯಲಲಿ ಮೆರಸಿ

ಗೆರೆ

—ಜಿ. ಎಸ್. ಶಿವರುದ್ರಪ್ಪ

ರುದ್ರ ಭೂಮಿಯ ನಿಶ್ಶಬ್ದಗಳಲ್ಲಿ
ನಾನೊಬ್ಬನೇ
ಸುತ್ತಲೂ ನಿಂತ ಮರಗಳಿಂದು–
ದುರುತ್ತಲಿವೆ ಎಲೆ
ಒಂದೊಂದೇ
ಗಾಳಿ ಬೀಸಿದ ಹಾಗೆ.

ಒಳಗೆ ಮಲಗಿದ್ದಾರೆ
ನಿನ್ನೆ–ಮೊನ್ನೆಯ ಮತ್ತೆ
ಅದರಾಚೆ ವರ್ಷಗಳ
ನೆಲವ ತುಳಿದವರು ;
ಉಸಿರಾಗಿ ಹೆಸರಾಗಿ
ಅವರಿವರ ಜತೆಯಾಗಿ
ಬದುಕಿದವರು.
ತಮ್ಮ ಕಾಲದ ಜತೆಗೆ
ಹೊಡೆದಾಡಿದವರು,
ಮಲಗಿದ್ದಾರೆ, ನಿಶ್ಶಬ್ದವಾಗಿ, ಕರಗಿ
ನೆಲದಾಳಗಳಲ್ಲಿ ಅರಗಿ
ಮತ್ತೆ ಸುತ್ತಲು ನಿಂತ ಈ
ಮರಗಿಡಗಳಲ್ಲಿ ಹಸುರಾಗಿ,

ಹೂವಾಗಿ, ಹಕ್ಕಿದನಿಯಾಗಿ
ನೆಲವ ತಬ್ಬಿರುವ ಹುಲ್ಲಾಗಿ ಕಲ್ಲಾಗಿ
ಇನ್ನೂ ಏನೇನೋ ಆಗಿ
ಗುರುತು ಸಿಗದಾಗಿ.

ನಾನು ಕೂತಿದ್ದೇನೆ, ಈ ನಡುವೆ
ಆಕಾರವಾಗಿ
ಉಸಿರಾಡುತ್ತ, ಇದನೆಲ್ಲ ನೋಡುತ್ತ
ನನಗು-ಅವರಿಗು ನಡುವೆ
ವ್ಯತ್ಯಾಸವೇನೆಂದು ಚಿಂತಿಸುತ್ತ
ಒಳಗು–ಹೊರಗುಗಳ ಗೆರೆಯ
ಗುರುತಿಸುತ್ತ.

ಮೂರು ಬಿಡಿ ಕವನಗಳು

—ಶೂದ್ರ ಶ್ರೀನಿವಾಸ್

ಹಾದಿಯಲ್ಲಿ ಸಿಕ್ಕ ಅವಳಿಗೆ
ಗುರುತಂ ಹೇಳಿದೆ
ಕಣ್ಣಿನಲ್ಲಿ ಅಪ್ಪಿ ಮುದ್ದಾಡಿ
ಚೆಲ್ಲಿದಳು
ಇನ್ನೂ ಬಿಡಿಸಿ ಹೇಳಬೇಕೆಂದರೆ
ದಬ್ಬಿದಳು.

—೨—

ಮನಸ್ಸು ಮಾಯದ ಘಾಯಕ್ಕೆ
ಚುಚ್ಚಿದಾಗ ಮನತುಂಬ
ಹರಿದ ಭಾವನೆಗಳು
ಅಂಬೆಗಾಲಿಟ್ಟು ನರಳಿದವು.

—೩—

ಅಳುವ ಮಗುವ ಮುದ್ದಿಸಿದಂತೆಲ್ಲ
ತುಂಬಿ ಬಂದ ರಾಗಗಳು
ಕತ್ತಲಿನ ನಕ್ಷತ್ರಗಳಂತೆ
ಅಥವಾ ಶಾಯಿಯ ಕಣ್ಣುಗಳ ಅಂತಃಕರಣದಂತೆ
ಅಥವಾ ಗೆಳತಿಯ ಕಣ್ಣುಗಳ ಮಾದಕತೆಯಂತೆ.

ನಿಮ್ಮಲ್ಲೊಬ್ಬ

—ಡಿ. ಎ. ಶಂಕರ್

ಸಂಜೆಗತ್ತಲಿನಲ್ಲಿ
ಸಾಲುಸಾಲಾಗಿ ಅಂಕುಡೊಂಕಾಗಿ ಸಮಾಂತರವಾಗಿ
ಇಲ್ಲ
ಅರ್ಥಕ್ಕೇ ಬಾಲಕತ್ತರಿಸಿದ ಹಲ್ಲಿಯ ಹಾಗೆ
ಗಕ್ಕನೆ ತಿರುತಿರುಗಿ ನಿಲ್ಲುವ
ನಿಂತು
ಎರಡು ಮೂರು ನೂರು ದಿಕ್ಕುಗಳಲ್ಲಿ ಹರಿಯುವ
ರಸ್ತೆಗಳಲ್ಲಿ ಓಣಿಗಳಲ್ಲಿ
ಒಂದಕ್ಕೊಂದು ಬೆಸಕೊಂಡು ನಿಂತ
ಒಂದೇಥರದ ಮನೆಗಳ ಕಂಡು
ಯಾವ ಮನೆಯವನು ಈ ನಾನು
ಎಂದು, ದಿಕ್ಕೆಟ್ಟು
ದಾರಿ ತೋರಿಸುವವರ ಹುಡುಕಿ ನಡೆದಾಗ
ಬಂತು, ಕಾಲ ಬಳಿಯೇ ಬಿತ್ತು :
ಮಿರಿಮಿರಿ ಮಿಂಚುವ
ಬಂಗಾರದ ಬಾಕು.
ಕತ್ತೆತ್ತಿ ನೋಡಿದರೆ :
ಕೈ ಮಾಡಿ ಕರೆಯುತ್ತ ಎದುರಿಗೇ ಕೂತಿದ್ದ.
ಮುಖದ ಅಂಗಳದ ತುಂಬ ಹರಡಿತ್ತು
ನವಿರು ಜಾಜಿಯ ಬೆಳ್ಳಿ ನಗು

ಬಗ್ಗಿ ಕೈಗೆತ್ತಿಕೊಂಡೆ, ತಣ್ಣಗೆ ಹೊಳೆಯುತ್ತಿತ್ತು.
ಇಟ್ಟೆ ಅವನೆದುರು ಮೇಜಿನ ಮೇಲೆ.
ಕೈ ಹಿಡಿದು ಕಣ್ಣಲ್ಲೇ ನಕ್ಕು
'ಉಫ್' ಎಂದು ಊದಿದ
ಪ್ರಜ್ವಲಿಸಿ ಬೆಂಕಿ ಬೆಳಗಿತು ಮರದ ಮೇಜಿನ ಮೇಲೆ.
ತುಸು ಬಗ್ಗಿ, ಬಾಕುವನ್ನೆತ್ತಿ, ಎದೆಯಗೂಡಿನ ಸುತ್ತ,
ಗೆರೆ ಎಳೆದು
ಸಕ್ಕರೆಗುತ್ತಿ ಹಾಕಿ ನೋಡುವ ಹಾಗೆ
ಥಕ್ಕನೆ ನೂಕಿ, ಒತ್ತಿ
ಹಿಡಿದೆಳೆದ ಡವಗುಡುವ ಎದೆಯನ್ನು :
ಒಗೆದ, ಉರಿವ ಬೆಂಕಿಯ ಒಳಗೆ–
ಹಿಸುಕಿ ನೋಡಿದ, ಕುಕ್ಕಿ ನೋಡಿದ,
ಇಲ್ಲ ಬೆಂದಿರಲಿಲ್ಲ, ನಿಜ :
ಕಟಕಟನೆ ಕಡಿದ ಹಲ್ಲಿನ ಸಾಲಲ್ಲಿ ಚಿಮ್ಮಿತು ಬೆಳಕು.
ನಡೆದೆ, ನಿಂತೆ, ಪರಿಚಿತ ಓಣಿಯಲ್ಲಿ
ಪರಿಚಿತ ಮನೆಯ ಬಾಗಿಲ ಮುಂದೆ.
ಅಕ್ಕ ಪಕ್ಕದವರೆಲ್ಲ ಪಕ್ಕೆ ಹಿಡಿದು
ನಕ್ಕು, ಬನ್ನಿ ಬನ್ನಿ ನಾಚಿಕೆ ಬೇಡ
ಗೊತ್ತಿದ್ದೆ ನಮಗೆಲ್ಲ, ಬನ್ನಿ, ಎಂದರು.

ಒಡೆದ ಕಡಲ ತೆರೆಗಳು

—ಶಂಕರ ಕಟಗಿ

ಒಂದು ದಿನ
ನೂರು ಮನ
ಒಡೆದ ಕಡಲ ತೆರೆಗಳು

ಮೋಡದುಂಡೆ ಬಿರಿದಾಗ
ಕುಂದಿಯುತ್ತಿರುವ ಕೆಂಡಗಳು
ನೆಲ ನಭವು ಸೀಳಿದಾಗ
ಚಿಂತೆ ಚಿತೆಯು ಪುಟಿದವು.

ಗಣಿಯು ಒಳಗೆ ಕಪ್ಪು ಮೈಗೆ
ರೋಮಾಂಚನವಾದವು.
ನಿಮಿರಿನಿಂತ ಎಲುಬುಗಳಿಗೆ
ಗಣಿ ಗುಡಾಣಿ ಕುಸಿದವು
ಮುಗಿಲಿನೆತ್ತರ ತೆರೆಗಳು
ಬಂಗಲೆಗಳಿಗೆ ಬಡಿದವು.
ತಿಂದು ತೇಗಿ ಸತ್ತ ಹೆಣವು
ರಸ್ತೆ ಮೇಲೆ ಬಿದ್ದವು
ಬಾಚಿದ್ದಲ್ಲು ಕರುಳ ಸುರುಳಿ
ಹಿಡಿಯು ತುಂಬ ಮಾಂಸ ಮುಂದೆ
ನೆತ್ತರವು ಬಸಿದವು
ಕಣ್ಣುರೆಪ್ಪೆ ಕಿಸಿದವು.

ಎಷ್ಟೊ ದಿನ ಹಸಿದವನ
ಒಡೆದ ಕಡಲ ತೆರೆಗಳು,

ಗುಡ್ಡ ಬೆಟ್ಟ ಸೀಳಿ ಬೆಳಕು
ಬೆಳ್ಳಿಯಾಯ್ತು ಭೂಮಿಗೆ
ಮೊಗ್ಗು ಅರಳಿದ ನಕ್ಷತ್ರ
ರಂಗೋಲಿಯು ಬಾನಿಗೆ.
ಹಾದಿ ತುಂಬ ರಕ್ತ ರಾಡಿ
ತಮಟೆ ಸದ್ದು ಮೊಳೆತವು
ದನಿಯು ಎತ್ತಿ ಹಾಡ ಹಾಡಿ
ನೂರು ಮನವು ಕುಣಿದವು.

ಹೋರಾಟದ ಅಬ್ಬರಕೆ
ಕೊರಗಿದವು ಒರೆಗಳು
ಒಡೆದ ಕಡಲ ತೆರೆಗಳು.

ಮುಂಗಾರು ಮಳೆ - ವಸುಂಧರೆ

—ಯು. ಎಸ್. ಶ್ರೀಧರ ಆರಾಧ್ಯ

ಮೋಡಗಳು ಮುಗಿಬಿದ್ದು ಮುಚ್ಚುತಿವೆ ಸೂರ್ಯನನು
ವೈಶಾಖ ಹುಟ್ಟಿಸಿದ ಶಾಖವನ್ನು
ಮುಂಗಾರ ರಭಸಕ್ಕೆ ತೆರೆದು ವಸುಂಧರೆಯೊಡಲು
ನಾಡಿ ನಾಡಿಗಳು ನಲಿದೆದ್ದು ತೆರೆಯುತಿವೆ
ಕಾಯುತ್ತ ತನಿಹನಿಯ ವರ್ಷವನ್ನು
ಒಡಲೆಲ್ಲ ಸುಡುಬಿಸಿಲು ತೆರೆತೆರೆದು ಮೈಚೆಲ್ಲಿ
ಸಂದು ಸಂದಲ್ಲಿ ತಂಗಾಳಿ ಸ್ಪರ್ಶಕ್ಕೆ ದೈನ್ಯದಾರ್ತನಾದ.

ಬಹುದೂರದ ದಾರಿಯವಳ ಮನೆ ಮಾಸಗಳೆ ಕಳೆದಿಹವು
ಬರುತಿಹನು ಬಹು ತಡೆದು ಮಡದಿಗಾಗಿ!
ಇನಿಯನಾಗಮನಕ್ಕೆ ಕಾಯುವಳು ಎಂತಿವಳು
ಜೀವ ಜಂಗುಳಿಯಂತು ಒಲುಮೆಗಾಗಿ.

ಗುಡುಗೇನು ಸಿಡಿಲೇನು, ಬೇಸರವ ಗುಡಿಗುಡಿಸಿ
ಸುಳಿದು ಬಹ ಆಹಾ! ಬಿರುಗಾಳಿಯೇನು!
ಕಾತರಿಸಿದವಳ ಜೀವ ಜೀಕುಯ್ಯಾಲೆ ವಸ್ತ್ರ ಅಸ್ತವ್ಯಸ್ತ
—ಮುಂಗುರುಳು
ರೋಮರೋಮಗಳಲ್ಲೂ ಸೃಷ್ಟಿಯುನ್ಮಾದವೇನು!

ಪ್ರೀತಿಯೇ ಹನಿಯಾಗಿ ಮೆಚ್ಚಿ ಸುರಿಯುವುದೊಂದು
ಆವರ್ಜ ಸಿಹಿಮುಟಿಯಿಂದ ಸವಿವುದೊಂದು

ಬಹುದಿನದ ಬೇಗೆಯನು ಮರೆಯುತ್ತ ಇನಿಮನದೆ
ಚೈತ್ರ ಸಾರ್ಥತೆಯನ್ನು ಪಡೆವುದೊಂದು

ಭೋರೆಂದು ಧೋಯೆಂದು ಸುಖಸುಖವಾಗಿ ಜಲಪಾತ
ಆಹಾ ! ಏನುನ್ಮಾದ ಏನುಲ್ಲಾಸ
ಮದನೋತ್ಸವದ ರಮ್ಯಹಾಸ !

ಮಾತು ಅಂದರೆ

—ಶ್ರೀಧರ ಪಿಸ್ಸೆ

ಮಾತು ಅಂದರೆ ಹೊಳಪು
ಪ್ರತಿಫಲದ ಬೆಳಕು

ಸೋಸಿ ಹೊರತೆಗೆದ ಹರಳು
ಹನಿಹನಿಯೂ ಕಾವಂನ ಬಿಲ್ಲಂ

ಕೆಂಪಗರಳಿದ ಮನಸು
ಕುದುರಿದಿಂದ್ರಿಯದ ಶೀಲ ತಂತು

ಎದೆಗೊದ್ದು ಜೀವ ಮಿಡಿಯುವ
ಅಟ್ಟುವರಮನೆಯ ಪಾರದರ್ಶಿಕೆ

ಕಣ್ಣಕಟ್ಟುವ ಮೈಬಿಚ್ಚುವ
ಕೈ ಅಮುಕಿದ ಕಚಗುಳಿಯ ಸ್ವರುಪ

ಹೆದೆಗೇರಿದ ಬೆದೆತುಂಬಿದ
ನಿಮಿರಿ ನಿಂತ ಸೆಳವು !

ಅವನ ನೆನಪು

—ಎಂ. ಸರಸ್ವತಿ ಗೌಡ

ನೆನಸಿದೆಲ್ಲ ನನ್ನದಾಗುವ ಮಾತು,
ಒಂದು ನೆನಪು.

ಉಸುಬಿನ ದಿಬ್ಬದ ಮೇಲೆ
ಬರೆದ ಚಿತ್ರ
ಬೆಳಗಾಗೆದ್ದು ಹಿಣುಕಿದಾಗ
ಎಲ್ಲವು ಮಸಕಾಗಿರುತ್ತೆ
ಕಲ್ಪನೆಗಳೆಲ್ಲ ಹುಸಿಗೋಡೆಗಳು
ಕನಸು ಕಾಯುವ ಕೆಲಸ ಕೊಟ್ಟಿತು.

ಕಣ್ಣುಗಳು ಹಸಿರುಕೋಟೆ ನಡುವೆ
ರೆಕ್ಕೆ ಬಿಚ್ಚುತ್ತವೆ.

ನಿನ್ನೆವರೆಗೂ ಕರಕಲಾಗಿದ್ದ
ನೋವು ಕರಗಿ ಜಡತೆ ನೀಗಿತು.

ಚಿಪ್ಪು ಒಡೆದು ಮುತ್ತು ಚೆಲ್ಲಿತು
ಗಟ್ಟಿ ಮುತ್ತುಗಳು.
ಮೂಗಿನ ತುಟಿಯು ನತ್ತಾಗಿ
ಗಾಳಿಯಲ್ಲಿ ಹಾರಿದವು,

ಪರಿಚಿತ ಹಗಲುಗಳು
ಕಾಲನ ಕಡಲಲ್ಲಿ ಕರಗಿದವು.

ರಂಗುರಂಗಿನ ಮಳೆಬಿಲ್ಲು ಬೆರೆದವು
ನನ್ನೆದೆಯಲ್ಲಿ.

ಶಬ್ದ, ತೆನೆ ಹಾಗು ಕೋಡು

—ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಮಧ್ವಮುನಿ ಅಂದರು, ''ಶಬ್ದವೆ ಸೃಷ್ಟಿಯು
ಶಬ್ದವೆ ಗೋಮತಿಯು ಪುಣ್ಯ ಜಲವು,
ಶಬ್ದವೇ ಹಗಲಿರುಳುಗಳ ಕಣ್ಣು ; ಬೆಸೆಯು
ವದು ವ್ಯಕ್ತ ಅವ್ಯಕ್ತಗಳನಾದಿ ಒಲವು.

ದೊರೆ ಅಂದ, ''ಎಂಥ ಮಾತಿದು ? ಎಲ್ಲಾದರೂ
ಮಂತ್ರಕ್ಕೆ ಉದುರುವುದೆ ಮರದ ಕಾಯಿ ?
ಎಲ್ಲಾದರೂ ಉಂಟೆ, ನಮಗೆ ಫಲ ಕೊಡುವ
ದು ? ಶಬ್ದವನು ಬಿತ್ತಿದರೆ ಭೂಮಿ ತಾಯಿ ?"

ಗೋಮತಿಯು ಹರಿದಿತ್ತು. ಹೊಳೆಯಲ್ಲಿ ಸರಿ
ದಿತ್ತು. ಅಲೆಯಲ್ಲಿ ಹೊಂಬೆಳಗು ಬಿಸಿಲುಗೊಂಡು,
ಬೆಳ್ಳಕ್ಕಿ ಸುತ್ತರಿದು ಹಾರಿದವು. ಶಬ್ದಕ್ಕೆ
ಬಿಳಿರೆಕ್ಕೆ ಮೂಡಿರುವ ಹಾಗೆ ಬಂದು.

ಮಧ್ವಮುನಿ ಅಂದರು, ''ಶಬ್ದವೆ ಬೀಜವು
ಬಿತ್ತಿದರೆ ಸಾಕೊಮ್ಮೆ ಹೃದಯ ಹೊಲದಿ,
ಋತವೆ ಹೂವಾಗಿ, ಅಮೃತ ಫಲ ನೀಡುವ
ದು, ಕಣ್ತೆರೆದು ಶಬ್ದವೆ, ಪುಣ್ಯ ನೆಲದಿ.

ಹೊಳೆಗೆ ಕಲ್ಲೆಸೆದಂತೆ, ನಕ್ಕುಬಿಟ್ಟನು ದೊರೆ,
''ಗೊಡ್ಡು ವೈದಿಕರ ಕತೆ, ವೇದವಂತೆ,

ಎಲ್ಲವೂ ಹುಸಿ ಬೊಗಳೆ, ಮಂತ್ರಕ್ಕೆ ಮೊಳ
ಕೆಯೆ ? ಕತ್ತೆಗೂ ಕೋಡು ಬರದಿರುವದುಂಟೆ ?"

ಮತ್ತೆ ನಕ್ಕನು ದೊರೆ. ತನ್ನನ್ನೆ ತಾ ಕಂಡು :
ಮಧ್ವ ಮುನಿ ತರಿಸಿದರು ; ಹೆಸರು ಕಾಳು
"ಯಾ ಓಷಧೀಃ" ಎಂಬ ಶ್ರುತಿ ಮಂತ್ರವೆಂದರು.
ಕಿವಿಯುಂಟೆ ದೊರೆ ? ಈಗ ಸ್ವಲ್ಪ ಕೇಳು.

ಕಣ್ಣುಂಟೇ ? ನೋಡು, ಬೆರಗಾಗಿ ಕಂಡ ದೊರೆ
ಮಧ್ವ ಮುನಿ ಅಂಗೈಯ ಕಾಳಿನಲ್ಲಿ.
ಬೇರಿಳಿದು ಸಸಿಯೆದ್ದು ಚಿಗುರಾಗಿ ತೆ
ನೆ ತುಂಬಿ, ತೂಗಿದವು ಮೆಲ್ಲನೆ ಗಾಳಿಯಲ್ಲಿ.

ಮಧ್ವ ಮುನಿ ಅಂದರು : "ಕೇಳಿದೆಯಂ ಕಂಡೆ
ಯ ? ಮಂತ್ರಗಳ ಮಹಿಮೆ ಹೀಗುಂಟು ನೋಡು."
ದೊರೆ ನಾಚಿಕೊಂಡು ಕಣ್ಮರೆಯಾದ. ಅಂಜಿ
ಬರಬಹುದು ತನಗಿನ್ನು ಎರಡು ಕೋಡು.

ಅನಾಮಿಕ ಹಕ್ಕಿಯ ಹಾಡು

—ಸುಬ್ರಾಯ ಚೊಕ್ಕಾಡಿ

ಹಕ್ಕಿ ಹಾಡಿತು—

ಮುಂಜಾನೆಯ ಶಾಂತ ಮೌನದಲ್ಲಿ
ವೀಣೆ ಮಿಡಿದಂತೆ . . . ಅಲ್ಲಲ್ಲ
ಎಲ್ಲೋ ಜೇನು ಹರಿದಂತೆ . . . ಛೇ ಛೇ ಸರಿಯಲ್ಲ
ಅಥವಾ ಇನ್ಯಾವುದೋ ರೀತಿ, ಸುಂದರವಾಗಿ
ಕವಿಗಳು ವರ್ಣಿಸುತ್ತಾರಲ್ಲ—ಹಾಗೆ
ಮರಗಳ ಜತೆಗೆ ನಾನು ಕೇಳಿದೆ.

ಎಲ್ಲಿದೆ ಈ ಹಾಡಿನ ಮೂಲ ? —ಸುತ್ತ
ಕಣ್ಣೋಡಿಸಿದೆ—ಹಸುರಿನ ನಡುವೆ
ರಾಗದ ಲಹರಿ ತೇಲಿ ಬಂದತ್ತಲೇ
ನೋಟವನು ಛೂ ಬಿಟ್ಟೆ—ಎಂಥ ಸ್ವರ ? ಎಂಥ ಸ್ವರ ?
ಎಲ್ಲಿ ಸ್ವರದ ಮೂಲ ?

ಸುತ್ತಲಿನ ಕಾಡಲ್ಲಿ ಈ ಸ್ವರದ, ಸ್ವರದ ಮೂಲವನು
ಹುಡುಕುತ್ತ ಅಲೆಯುತ್ತ ಹೋದಂತೆ ಹೊತ್ತೇರಿ
ಚಟುವಟಿಕೆ ಸುರುವಾಯ್ತು :
ಜೇನು ಹುಡುಕುವವರ ಸದ್ದು
ಮರಗಳ ಮೂಲಕೆ ಗುದ್ದು

ಅರಣ್ಯ ರಕ್ಷಕರ ಸೊಲ್ಲು
ಕೂಲಿಗಳ ಲಾರಿಗಳ ಗುಲ್ಲು
ಯಾವುದೋ ಪ್ರಾಣಿಯು ಅರಚು
ಎಲ್ಲೋ ಕಾಗೆಯು ಕಿರುಚು

ಸದ್ದುಗುದ್ದು ಸೊಲ್ಲು ಅರಚು ಕಿರುಚು ಗುಲ್ಲು
ಒಂದರ ಮೇಲೆ ಒಂದರ ಹಾಗೆ
ಒಂದರ ಒಳಗಿಂದೊಂದರ ಹಾಗೆ
ನುಗ್ಗುತ್ತ ಹರಡುತ್ತ ಬಂದ ಕಲರವಗಳ ನಡುವೆ
ಹಕ್ಕಿ ಹಾಡಿನ ಎಳೆಗಳು ನಿಧಾನ
ಕ್ಷೀಣಿಸುತ್ತಾ ಹೋದದ್ದೇ ತಿಳಿಯಲಿಲ್ಲ
ಹುಡುಕುತ್ತಾ ಹೋದ ನನಗೆ
ಸಂಜೆಯಾದರೂ ಕೂಡಾ
ಆದಿನವೆಂದೇನು.
ಆಮೇಲೆಂದೂ
ಆ ಹಕ್ಕಿ ಕಾಣಿಸಲೇ ಇಲ್ಲ
ಹಕ್ಕಿಯ ಹಾಡು ಕೇಳಿಸಲೇ ಇಲ್ಲ.

ಹೆಣದ ಹಿಂದೆ

—ಎಸ್. ಜಿ. ಸಿದ್ಧರಾಮಯ್ಯ

ಹೌದು ಮಾರಾಯ ಇಬ್ಬರೂ ಹೊಸ್ತಿಲ ಮೇಲೆ ಕುಳಿತು
ನಿನ್ನ ಮಣಿ ನಾನು ನನ್ನ ಮಣಿ ನೀನು ಕಲ್ಲಲ್ಲಿ ಜಜ್ಜಿದ್ದು
ನಡು ಬೆರಳ ಮೇಲೆ ಅವರೆ ಮೂಡಿಸಹೋಗಿ ಒಬ್ಬರಿಗೊಬ್ಬರು
ಜುಟ್ಟಾಡಿ ಅಜ್ಜಿಯಿಂದ ತಪರಾಕಿಸಿಕೊಂಡದ್ದು
ಒಟ್ಟಿಗೆ ಕೂಡಿ ಗುಣಿಸಿ ಭಾಗಿಸಿ ಕಳೆದದ್ದು ಎಲ್ಲ ಭೂತದ ಬುತ್ತಿ.

ಹನ್ನೆರಡು ವರ್ಷಗಳ ಮೇಲೆ ಮುಖ ತೋರಿಸಿದ್ದೀಯೆ
ಹೆಸರು ಕರೆಯಬಾರದು ಸಂಬಂಧ ಕೊರಗಬಾರದು
ಇರಲಿ ಬಾ. ಹಗೆ ಕೊಟ್ಟ ಹಾಳೆ ವಸಂತವೋ ಗ್ರೀಷ್ಮವೋ ?
ಅವ್ವ ಅಪ್ಪರು ಯೋಗವೇ ? ಮಡದಿ ಇದ್ದರೆ ಕ್ಷೇಮವೇ
ಮಕ್ಕಳು ಮರಿ ಎಂತಷ್ಟು ಕೇಳಬಹುದಲ್ಲ ? ಹೇಳು.

ಪಾರ್ಥ ನೀನಾಗಿ ಕರ್ಣ ನಾನಾಗಿ ಸಾವಿತ್ರಿ ಸೋಮಪ್ರಭೆಯಾಗಿ
ನಾಲ್ಕನೇ ತರಗತಿ ನಾಟಕ. ಅದು ಹೋಗಿ ಇಬ್ಬರೂ ಕರ್ಣರಾಗಿ
ಬದುಕಿನ ಸೋಮಪ್ರಭೆಗೆ ಸ್ಪರ್ಧಿಸಿ ತಂದ ಹಗೆಯಲ್ಲವೇ ಇದು ?
ಇಬ್ಬರನೂ ಎರಡು ಕಣ್ಣಿಂದ ಸಾವಿತ್ರಿ ಸೋಮಪ್ರಭೆಯಾಗಲಿಲ್ಲ
ಆದರೆ ನಾಟಕ ಅವಳ ಬದುಕ ಬಿಡಲಿಲ್ಲ. ಹರಿದಾರಿಗಳಾಚೆಗೆ ನೀನು
ಬೆಂಕಿಗೂ ನೀರಿಗೂ ದೂರಾಗಿ ಮದುವೆ ಇಲ್ಲದ ಮುದುಕ ನಾನು.

ಸುದ್ದಿ ಗೊತ್ತಾಗಿ ಸಾವಿಗೆ ಬಂದೆಯಾ ? ಇದು ವಿಚಿತ್ರ ! ಬೇವು
ಬಗೆಯೊಳಗೆ ಹೊಗೆ ಮಾಡಿ, ಸಾವು ಸಂಬಂಧಗಳ ಹತ್ತಿರ ತಂದಿದೆ.

ಊರ ಮುಂದಲ ಹುಣಿಸೆ ಮರದಡಿಯೆ ಬಂದೆಯಾ ? ಅಲ್ಲಿ
ಕಾಣಲಿಲ್ಲವೇ ನೇತಾಡಿದ್ದ ನೇಣು ? ಹನ್ನೆರಡು ವರ್ಷಗಳು
ಹರಿದಾಡಿ ಪೂತ್ಕರಿಸಿದ್ದ ಸಂಶಯದ ಕಾಲಸರ್ಪ !

ಇಗೋ ಇಲ್ಲಿ ಗುಂಪಿನ ನಡುವೆ ಅಪ್ಪನ ಪ್ರೀತಿಗೆ ನಂಜಾಗಿ
ನಮ್ಮಿಬ್ಬರ ಕಡೆ ಬೆರಳಾದ ವರ್ತಮಾನದ ನರಳು ವೃಷಕೇತು !
ಹೇಳು ಗೆಳೆಯ ನಿನ್ನ ಮಾಣಿಯ ಕಲೆ ಮಾದಿದೆಯೇ ?

ಬೃಹನ್ನಗರ

—ಹೇಮಂತ ಕುಲಕರ್ಣಿ

ಇದೊಂದು ಬೃಹನ್ನಗರ !
ಇದರ ಹೆಸರು
ನೀವೇನು ಕರೆದರೂ ಸರಿ :
ಬಾಂಬೇ, ಕಲ್ಕತ್ತ, ಟೋಕಿಯೋ..........

ಬಾಲಕೃಷ್ಣನ ಕೊಲಲು
ಬಂದ ಪೂತನಿಯಂತೆ
ಬಿದ್ದು ಕೊಂಡಿಹಳಿಲ್ಲಿ
ಆತ್ಮಗಳ ಚಿವುಟುತ್ತ
ಬೃಹದ್ದೇಹಿ ರಕ್ಕಸಿ !

ಮನೆಮನೆಯಲಿ
ವ್ಯಥೆ ಹೊತ್ತಿದೆ
ಲಕ್ಷದೀಪ ಝಗಮಗ
ಅದರ ಬೆಳಕಿನ ಕೆಳಗೆ
ಕಪ್ಪು ಹೊಳೆಯೊಲು ಹರಿವ
ಕವಿ ಕೇಳದ, ರವಿ ಕಾಣದ
ಕರುಳಿಗೇನೋ ತಿಳಿದ
ರಾಮಾಯಣ ಕಾವ್ಯವು
ಶೋಕವಿಹುದು
ಶ್ಲೋಕವಿಲ್ಲ

ಶಬ್ದದಾಚೆಯ ಭಾವವು.
ರಾವಣನ ವೈಭವಕೆ
ಮನಸೋತ ಜಾನಕಿಯು
ಶೋಕವನದಿ ಬದ್ಧಳು.

ಏಕ ಪತ್ನೀವ್ರತವ
ಮರೆತು ಹೋದನು ರಾಮ
ಅವನ ಮನೆಯಾಗಿಹುದು
ರಾಸಲೀಲಾ ಧಾಮ !

ಲವಕುಶರು ಬೀದಿಯಲಿ
ರಾಮನಾಮವ ಜಪಿಸಿ,
ಬಿಕ್ಕೆ ಬೇಡುತಲಿಹರು
ರಾಮ ವನವಾಸವನು
ಹಾಡಿ ಹೇಳುವರು.

ಕೊಲೆಗಾರ ತಂಡದಲಿ
ಬೆಳೆದು ಬಂದನು ಕವಿಯು
ಕಳ್ಳಸಂತೆಯ ನಡುವೆ
ಹುತ್ತ ಬೆಳಸಿಹನು.

ಮೀನಗಾರನ ಬಲೆಗೆ
ಸಿಕ್ಕ icarus – ಶವವ
ಎಳೆದು ತಂದರು ದಂಡೆಗೆ
ಇವನ ಪಕ್ಕಗಳೆಲ್ಲಿ
ಎಂಬ ಯಕ್ಷಪ್ರಶ್ನೆ
ಸಾಗರದಿ ತೆರೆಯಾಗಿ
ಬಾನ ಕೆಣಕಿಹುದು.

ಕ್ರೌಂಚ ಮಿಥುನದ ವಿರಹ–
ಗೀತದಾರ್ತಸ್ವರವು
ಗಾಳಿ ಸೀಳುತ ನಡೆಯೆ
ಕಿವಿಯೆತ್ತಿ ಕೇಳಲೆಳಸುವ
ಜೀವ ಮಾಯವಾಗಿಹುದು.
ನೋಡಲೆತ್ತಿದ ಕಣ್ಣು
ಕಡಲಲ್ಲಿ ಮುಳುಗಿ ಹೋಗಿಹುದು.

ಕವಿಗಳ ವಿಳಾಸ

ಡಾ. ಯು. ಆರ್. ಅನಂತಮೂರ್ತಿ
849, ಟಿ.ಕೆ. ಲೇಔಟ್, ಮೈಸೂರು–570 009.

ಅಬ್ದುಲ್ ಮಜೀದ್ ಖಾನ್
20, 12ನೇ ಮುಖ್ಯ ರಸ್ತೆ, ಒಂದನೇ ವಿಭಾಗ, ರಾಜಾಜಿನಗರ ಬೆಂಗಳೂರು–560 010.

ಶ್ರೀ ಅರವಿಂದ ನಾಡಕರ್ಣಿ
ಕೇತಾಯುನ್ ಮ್ಯಾನ್‌ಶನ್ಸ್ ಶಹಾಜೀ ರಾಜೇ ಮಾರ್ಗ, ಮುಂಬೈ–57.

ಕಯ್ಯಾರ ಕಿಞ್ಞಣ್ಣ ರೈ
ಪೆರಡಾಲ - 670 551 ಕಾಸರಗೋಡು.

ಶ್ರೀ ಕೇಶವ ಮಳಗಿ
ಆಂಜನೇಯ ದೇವಸ್ಥಾನ, ರಾಯಲ್ ಬಸ್ ಸ್ಟ್ಯಾಂಡ್ ಹಿಂಭಾಗ, ಬಳ್ಳಾರಿ-583 101.

ಪ್ರೊ. ಗೋಪಾಲಕೃಷ್ಣ ಅಡಿಗ
460 ಎ, ಬನಶಂಕರಿ, 6ನೇ ಕ್ರಾಸ್, ಕನಕಪುರರಸ್ತೆ, ಬೆಂಗಳೂರು–560 070.

ಶ್ರೀ ಗಂಗಾಧರ ವಿ. ಚಿತ್ತಾಲ
ಸಿ–7, ಫ್ಲ್ಯಾಟ್ –2, ಜೆ.ಪಿ. ನಗರ, ಬೋರಿವ್ಲಿ, ಮುಂಬಯಿ–103.

ಶ್ರೀ ಚಂದ್ರಶೇಖರ ಪಾಟೀಲ
ಸಂಪಾದಕರು, "ಸಂಕ್ರಮಣ", ಧಾರವಾಡ-580 008

ಶ್ರೀ ಚೆನ್ನಣ್ಣ ವಾಲೀಕಾರ
ಕನ್ನಡ ಪ್ರಾಧ್ಯಾಪಕರು, ಎಲ್.ವಿ.ಡಿ. ಕಾಲೇಜು, ರಾಯಚೂರು.

ಚೆನ್ನವೀರ ಕಣವಿ
ಚೆಂಬೆಳಕು, ಕಲ್ಯಾಣನಗರ, ಧಾರವಾಡ.

ಶ್ರೀ ಜಯರಾಮ ಕಾರಂತ
ನವಭಾರತ ಪುಸ್ತಕ ಭಂಡಾರ, ಉಡುಪಿ–576 101.

ಶ್ರೀ ಜಯಂತ ಕಾಯ್ಕಿಣಿ
ಡಿ–7, ವೈಶಾಲಿ ನಗರ, ಬಾಲರಾಜೇಶ್ವರ ರಸ್ತೆ, ಮುಳುಂದ್, ಮುಂಬಯಿ-80.

ಡಾ. ಕೆ. ವಿ. ತಿರುಮಲೇಶ್
ರೀಡರ್, ಸಿ.ಐ.ಇ.ಎಫ್ ಎಲ್., ಹೈದರಾಬಾದ್.

ಶ್ರೀ ದೊಡ್ಡರಂಗೇಗೌಡ
ಕಾವ್ಯಶ್ರೀ, ದತ್ತಾತ್ರೇಯ ಆಶ್ರಮದ ಹತ್ತಿರ, ವಿಶ್ವೇಶ್ವರಯ್ಯ ಬಡಾವಣೆ,
ಹೊಸಕೋಟೆ - 562 104.

ಶ್ರೀ ಧರಣೇಂದ್ರ ಕುರಕುರಿ
ಪ್ರಾಂಶುಪಾಲರು, ಶ್ರೀ ಕುಮಾರೇಶ್ವರ ಪದವಿ ಕಾಲೇಜು. ಹಾನಗಲ್ಲ–581 104.

ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ
ಗುತ್ಯಪ್ಪ ಕಾಲೋನಿ, ಸರ್ಕಿಟ್ ಹೌಸ್ ಹತ್ತಿರ, ಶಿವಮೊಗ್ಗ–577 201.

ಶ್ರೀ ಕೆ. ಎಸ್. ನರಸಿಂಹಸ್ವಾಮಿ
5, 3ನೇ ಕ್ರಾಸ್, 4ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು-85.

ಡಾ. ಪು.ತಿ. ನರಸಿಂಹಾಚಾರ್
578, 11ನೇ ಮೈನ್, 5ನೇ ಬ್ಲಾಕ್ ಜಯನಗರ, ಬೆಂಗಳೂರು–41.

ಪ್ರೊ. ಕೆ. ಎಸ್. ನಿಸಾರ್ ಅಹಮದ್
ಹಮೀದಾ ಹೈದರ್, 341, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-70

ಡಾ. ಬಸವರಾಜ ಸಬರದ
ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ಕಾಲೇಜು, ಬೀದರ್–585 401.

ಶ್ರೀ ಜಿ. ಪಿ. ಬಸವರಾಜು
ಪ್ರಜಾವಾಣಿ ಪತ್ರಿಕಾ ಪ್ರತಿನಿಧಿ. ನಂ. 12. ಮಿಲಾಗ್ರಿಸ್ ಸೆಂಟರ್, ಹಂಪನಕಟ್ಟೆ,
ಮಂಗಳೂರು.

ಶ್ರೀ ಪಿ. ಜಿ. ಭಟ್ಟ
4-1, "ಸೀಮಾ", 4 ಬಂಗಲೆ ರಸ್ತೆ ಅಂಧೇರಿ (ಪಶ್ಚಿಮ), ಮುಂಬಯಿ-58.

ಶ್ರೀಮತಿ ಭಾರತೀ ರಾವ್
187. 36ನೇ ಬಿ ಕ್ರಾಸ್, 7ನೇ ಬ್ಲಾಕ್, ಜಯನಗರ. ಬೆಂಗಳೂರು-11.

ಶ್ರೀ ಮಹಾಬಲ ಮೂರ್ತಿ ಕೊಡ್ಲೆಕೆರೆ
ಕರ್ನಾಟಕ ಬ್ಯಾಂಕ್, ನವಲಗುಂದ, 582 208

ಡಾ. ನಾ. ಮೊಗಸಾಲೆ
ಕಾಂತಾವರ. ಕಾರ್ಕಳ. ದಕ್ಷಿಣ ಕನ್ನಡ.

ಶ್ರೀ ಜಿ. ಎನ್. ಮೋಹನ್
142. "ಮನೆ" 69ನೇ ಕ್ರಾಸ್. 5ನೇ ಬ್ಲಾಕ್. ರಾಜಾಜಿನಗರ, ಬೆಂಗಳೂರು-10.

ಶ್ರೀ ಕೆ. ಎಸ್. ರಾಜ (ನಂದಿ)
ಕೇರಾಫ್ : ಗುರುಪ್ರಸಾದ ಪ್ರಕಾಶನ. ಮನೆ ನಂ. 3 : 40, ಸರಸ್ವತಿ ಗೋದಾಮು,
ಮುಖ್ಯರಸ್ತೆ, ಗುಲಬರ್ಗಾ-585 101.

ಡಾ. ಬಿ. ಸಿ. ರಾಮಚಂದ್ರ ಶರ್ಮ
"ಪರಾಶರ" 222. 39ನೇ 'ಸಿ' ಕ್ರಾಸ್. 5ನೇ ಬ್ಲಾಕ್. ಜಯನಗರ,
ಬೆಂಗಳೂರು-560 041.

ಶ್ರೀ ರಾಮದಾಸ್
ಕನ್ನಡ ಪ್ರಾಧ್ಯಾಪಕರು. ಪೂರ್ಣಪ್ರಜ್ಞ ಕಾಲೇಜು. ಉಡುಪಿ-576 101.

ಶ್ರೀ ಬಿ. ಆರ್. ಲಕ್ಷ್ಮಣರಾವ್
ಸಾರಥಿ ಸ್ಟುಡಿಯೋ. ಕೆ. ಆರ್. ಬಡಾವಣೆ, ಚಿಂತಾಮಣಿ.

ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು-560 056.

ಶ್ರೀಮತಿ ಬಿ. ಟಿ. ಲಲಿತ ನಾಯಕ್
"ಕ್ರಾಂತಿಪಥ", ಎಲ್ 230, ನಿಜಲಿಂಗಪ್ಪ ಕಾಲೋನಿ, ರಾಯಚೂರು-584101.

ಶ್ರೀ ಚಿಕ್ಕವೀರಯ್ಯ. ವಿ.
ಚಿಕ್ಕವೀರಯ್ಯನ ಪಾಳ್ಯ, ತುಮಕೂರು.

ಶ್ರೀ ಕುಂ. ವೀರಭದ್ರಪ್ಪ
ಗೂಳ್ಯಂ-518348, ಕರ್ನೂಲು ಜಿಲ್ಲೆ. ಆಂಧ್ರಪ್ರದೇಶ

ಶ್ರೀ ವೇಣುಗೋಪಾಲ ಸೊರಬ
86, ಕನಕ ಆಸ್ಪತ್ರೆ ರಸ್ತೆ, ಆಜಾದ್ ನಗರ, ಕನಕಪುರ-562117.

ಶ್ರೀ ಎಚ್. ಎಸ್. ವೆಂಕಟೇಶ ಮೂರ್ತಿ
101, ಗಣೇಶ ಮಂದಿರಂ ರಸ್ತೆ, ತ್ಯಾಗರಾಜನಗರ, ಎರಡನೇ ಬ್ಲಾಕ್,
ಬೆಂಗಳೂರು-560 028.

ಶ್ರೀಮತಿ ವೈದೇಹಿ
ಕವಿತಾ ಕಾಂಪೌಂಡ್, ಸಿರಿಬೀಡು, ಉಡುಪಿ-576 101.

ಶ್ರೀ ಎಂ. ಎನ್. ವ್ಯಾಸರಾವ್
19—54, ಪೂರ್ವ ಆಂಜನೇಯಗುಡಿ ಬೀದಿ, ಬಸವನಗುಡಿ, ಬೆಂಗಳೂರು-560 004.

ಶ್ರೀಮತಿ ಶಶಿಕಲಾ ವಸ್ತ್ರದ
ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಂಡ್ಯ.

ಶ್ರೀ ಎಚ್. ಎಸ್. ಶಿವಪ್ರಕಾಶ್
ಇಂಗ್ಲಿಷ್ ಉಪನ್ಯಾಸಕರು, ಹೋಂ ಸೈನ್ಸ್ ಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು-9.

ಡಾ. ಜಿ. ಎಸ್. ಶಿವರುದ್ರಪ್ಪ
"ಚೈತ್ರ" 867, 18ನೇ ಮೈನ್, ಬನಶಂಕರಿ ಎರಡನೇ ಹಂತ,
ಬೆಂಗಳೂರು-70

ಶ್ರೀ ಶೂದ್ರ ಶ್ರೀನಿವಾಸ
ಸುದ್ದಗುಂಟೇ ಪಾಳ್ಯ, ಡಿ.ಆರ್. ಕಾಲೇಜು ಪೋಸ್ಟ್, ಬೆಂಗಳೂರು.

ಡಾ. ಡಿ. ಎ. ಶಂಕರ
ರೀಡರ್, ಇಂಗ್ಲೀಷ್ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–6.

ಶ್ರೀ ಶಂಕರ ಕಟಗಿ
ಇಂಗ್ಲಿಷ್ ಪ್ರಾಧ್ಯಾಪಕ, ಕೇರಾಫ್ ಸಂಕ್ರಮಣ, ಧಾರವಾಡ–8.

ಶ್ರೀ ಯಂ. ಎಸ್. ಶ್ರೀಧರಆರಾಧ್ಯ
ಜೂನಿಯರ್ ಕಾಲೇಜು, ಮಾದಾಪುರ, ಕೊಡಗು ಜಿಲ್ಲೆ.

ಶ್ರೀ ಶ್ರೀಧರ ಪಿಸ್ಸೆ
ಮರಳವಾಡಿ-562121.

ಶ್ರೀಮತಿ ಎಂ. ಸರಸ್ವತಿಗೌಡ
ಮತ್ತೀಕೆರೆ, ಚನ್ನಪಟ್ಟಣ ತಾಲ್ಲೋಕು, ಬೆಂಗಳೂರು ಜಿಲ್ಲೆ.

ಶ್ರೀ ಸು.ರಂ. ಎಕ್ಕುಂಡಿ
683, ಮೊದಲನೇ 'ಇ' ಕ್ರಾಸ್, 3ನೇ ಸ್ಟೇಜ್, 4ನೇ ಬ್ಲಾಕ್,
ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು-560 079.

ಶ್ರೀ ಸುಬ್ರಾಯ ಚೊಕ್ಕಾಡಿ
ಅಂಚೆ, ಚೊಕ್ಕಾಡಿ–574212. ದ. ಕ.

ಶ್ರೀ ಎಸ್. ಜಿ. ಸಿದ್ಧರಾಮಯ್ಯ
ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ತುಮಕೂರು.

ಶ್ರೀ ಹೇಮಂತ ಕುಲಕರ್ಣಿ
402, ರಿವೇರ, ಗಾಂಧೀಗ್ರಾಮ ರಸ್ತೆ, ಜುಹು, ಮುಂಬಯಿ–48.

ಕರ್ನಾಟಕ ಸಾಹಿತ್ಯ ಅಕಾದೆಮಿಯ ಪ್ರಕಟಣೆಗಳು

ಕನ್ನಡದಲ್ಲಿ ಅರವಿಂದ ದರ್ಶನ	3-00
ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ	3-00
ವಿಮರ್ಶಾ ತತ್ತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ (ಸಂ : ವಿ. ಕೃ. ಗೋಕಾಕ್ ಮತ್ತು ಆರ್. ಜಿ. ಕುಲಕರ್ಣಿ)	40-00

ಕತೆ

1979 (ಸಂ : ಬಿ. ವಿ. ವೈಕುಂಠರಾಜು)	1-50
1980 (ಸಂ : ಬಿ. ಶಾಮಸುಂದರ)	1-50
1981 (ಸಂ : ಗಿರಡ್ಡಿ ಗೋವಿಂದರಾಜ)	1-50
1982 (ಸಂ : ಈಶ್ವರಯ್ಯ)	1-50
1883 (ಸಂ : ಎಸ್. ದಿವಾಕರ)	1-50
1984 (ಸಂ : ಕಾಳೇಗೌಡ ನಾಗವಾರ)	5-00
1985 (ಸಂ : ಶ್ರೀಕಂಠ ಕೂಡಿಗೆ)	5-00

ಕವಿತೆ

1979 (ಸಂ : ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ)	1-50
1980 (ಸಂ : ಚೆನ್ನವೀರ ಕಣವಿ)	1-50
1981 (ಸಂ : ಎಚ್. ಎಸ್. ವೆಂಕಟೇಶಮೂರ್ತಿ)	1-50
1982 (ಸಂ : ಕೆ. ಎಸ್. ನಿಸಾರ್ ಅಹಮದ್)	1-50
1983 (ಸಂ : ಡಿ. ವಿಜಯ)	1-50
1985 (ಸಂ : ವೇಣುಗೋಪಾಲ ಸೊರಬ)	3-00

ಸಾಹಿತ್ಯ ವಿಮರ್ಶೆ

1979 (ಸಂ : ಜಿ. ಎಸ್. ಶಿವರುದ್ರಪ್ಪ)	1-50
1980 (ಸಂ : ಸಿ. ಪಿ. ಕೃಷ್ಣಕುಮಾರ್)	1-50
1981 (ಸಂ : ಕೆ. ವಿ. ನಾರಾಯಣ)	1-50
1982 (ಸಂ : ನರಹಳ್ಳಿ ಬಾಲಸುಬ್ರಹ್ಮಣ್ಯ)	1-50

1983 (ಸಂ : ಟಿ. ಪಿ. ಅಶೋಕ) 1-50
1984 (ಸಂ : ಎಚ್. ಎಸ್. ರಾಘವೇಂದ್ರರಾವ್) 5-00
1985 (ಸಂ : ಭಗವಾನ್) 5-00

ಮಕ್ಕಳ ಸಾಹಿತ್ಯ

1984 (ಸಂ : 'ಸಿಸು' ಸಂಗಮೇಶ) 3-00
1985 (ಸಂ : ಬಿ. ಎಸ್. ರುಕ್ಕಮ್ಮ) 3-00

ಪ್ರಬಂಧ

1985 (ಸಂ : ವೀರೇಂದ್ರ ಸಿಂಪಿ) 5-00

ಇತರೆ

ಬಿ. ಎಂ. ಶ್ರೀ. (ವಿ. ಎಂ. ಇನಾಂದಾರ್) 1-00
ಮಧುರಚೆನ್ನ (ಚೆನ್ನವೀರ ಕಣವಿ) 2-00
ಗೋವಿಂದ ಪೈ (ಸಂ : ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ) 1-00
ಕನ್ನಡ ಭಾರತಿ (ಸಂ : ಎಲ್. ಎಸ್. ಶೇಷಗಿರಿರಾವ್) 12-00
ಚಿಕವೀರ ರಾಜೇಂದ್ರ : ಒಂದು ಚಿಂತನ
(ಸಂ : ಕೆ. ಎಸ್. ನಿಸಾರ್ ಅಹಮದ್) 3-00

ತ್ರೈಮಾಸಿಕ

CHANDANA
ಚಂದನ

ದಶವಾರ್ಷಿಕಗಳು

ದಶವಾರ್ಷಿಕ ಕವಿತೆಗಳು 12-00
(ಪ್ರಧಾನ ಸಂ : ಕೆ. ಎಸ್. ನಿಸಾರ್ ಅಹಮದ್)

Ten years of Kannada Poetry 10-00
(ಪ್ರಧಾನ ಸಂ : ಕೆ. ಎಸ್. ನಿಸಾರ್ ಅಹಮದ್)

‘ಕವಿತೆಗಳು – ೧೯೮೫’ರ ಪದ್ಯಗಳು ಕನ್ನಡ ಕಾವ್ಯ ಇತ್ತೀಚಿನ ದಿನಗಳಲ್ಲಿ ಹಿಡಿದಿರುವ ಗತಿಯನ್ನು ಪರೋಕ್ಷವಾಗಿ ಸೂಚಿಸುವುದರ ಜೊತೆಗೇ ಕವಿಯ ಬಹಿರ್ಮುಖ ಅನುಭವಗಳ ವ್ಯಾಪ್ತಿ ಮತ್ತು ವ್ಯುತ್ಪತ್ತಿಯ ಕಡೆಗೂ ತೋರುಬೆರಳಾಗುತ್ತವೆ. ನಮ್ಮ ಕವಿಗಳ ಆಸಕ್ತಿಯಲ್ಲಿನ ಸಮಾನತೆ ಹಾಗೂ ಅಭಿವ್ಯಂಜನೆಯ ವೈವಿಧ್ಯ ಹೊಗಳಿಕೆಗೆ ತಕ್ಕದ್ದಾಗಿದೆ. ಅಂತರ್ಮುಖತೆಯ ದ್ರವ್ಯ ತಕ್ಕ ಪ್ರಮಾಣದಲ್ಲಿ ಕೂಡಿಕೊಳ್ಳಬೇಕಾದ ಅನಿವಾರ್ಯವನ್ನೂ ಸೂಚಿಸುವುದು ಉಚಿತವೆನ್ನಿಸುತ್ತದೆ. ರೋಚಕತೆ, ಅನುಭವದ ವೈಯಕ್ತಿಕತೆಗಳನ್ನು ಮೀರಿದ ಸಾರ್ವತ್ರಿಕ ಚಹರೆಯ ಕಾವ್ಯ ನಮ್ಮ ಇವೊತ್ತಿನ ಸಾಹಿತ್ಯಕ ಅಗತ್ಯಗಳಲ್ಲಿ ಒಂದು ಎನ್ನುವ ಅಂಶ ಇಲ್ಲಿನ ಕವನಗಳ ಓದಿನಿಂದ ದೃಢಗೊಳ್ಳುತ್ತದೆ.

“ಅಧ್ಯಕ್ಷರ ಮಾತು”ಗಳಿಂದ